# ಮಜ್ಲಿಸ್ ಶೂರಾದ ಪ್ರಾಧಾನ್ಯ ಹಾಗೂ ಶೂರಾದ ಸದಸ್ಯರ ಮತ್ತು ಹುದ್ದೇದಾರರ ಹೊಣೆಗಾರಿಕೆಗಳು

**Majlis e Shura Ki Ahmiyat Aur Membaran e Shura Wa Uhdedarane Jama'at Ki Zimmadariyan**

ಮಜ್ಲಿಸ್ ಶೂರಾ ಭಾರತ

# ಮಜ್ಲಿಸ್ ಶೂರಾದ ಪ್ರಾಧಾನ್ಯ ಮತ್ತು ಹೊಣೆಗಾರಿಕೆಗಳು

ಜುಮಾ ಖುತ್‌ಬ:

**ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**

ಪ್ರಕಾಶಕರು:

**ಮಜ್ಲಿಸ್ ಶೂರಾ, ಭಾರತ**

**Majlis Shooradha Praadhaanya matthu Honegarikegalu**

Kannada rendering of Urdu work:

مجلس شوریٰ کی اہمیت اور ممبرانِ شوریٰ و عہدیدران جماعت کی ذمہ داریاں

***"Majlise Shoora ki Ahmiyat aor Membrane Shoora wa Ohdedarane Jama'at ki Zimmedariya(n)"***


Friday Sermon : Hazrat Mirza Masroor Ahmad

Translated by : Kannada Desk, Nazarat Nashro Ishaat

Published by : Majlis Shoora Bharat

First Edition : 2025

Copies : 300

Printed at : Fazl-e-Umar Printing Press, Qadian

# ಮಜ್ಲಿಸ್ ಶೂರಾದ ಪ್ರಾಧಾನ್ಯ ಮತ್ತು ಹೊಣೆಗಾರಿಕೆಗಳು

*ಹಝ್ರತ್ ಮಿರ್ಝಾ಼ ಮಸ್ರೂರ್ ಅಹ್ಮದ್ ಖ಼ಲೀಫತುಲ್ ಮಸೀಹ್ ಖ಼ಾಮಿಸ್ ಅಯ್ಯದಹುಲ್ಲಾಹ್ ತಆಲ ಬಿನಸ್ರಿಹಿಲ್ ಅಝೀ಼ಝ಼್ ನೀಡಿದ ಜುಮಾ ಖ಼ುತ್ಬದ ಕನ್ನಡ ಅನುವಾದ.*

(ಮುಬಾರಕ್ ಮಸೀದಿ, ಇಸ್ಲಾಮಾಬಾದ್, ಟಿಲ್ಫೋರ್ಡ್, ಯು.ಕೆ. ಯಿಂದ 2023ರ ಮೇ 12, ಶುಕ್ರವಾರದಂದು ಎಂ.ಟಿ.ಎ. ಇಂಟರ್ನ್ಯಾಶನಲ್ ಚ್ಯಾನಲ್ ಮೂಲಕ ಬಿತ್ತರಿಸಲಾಯಿತು.)

ಇಸ್ಲಾಮಿನ ಸಾಂಪ್ರದಾಯಿಕ ಪ್ರಾರ್ಥನೆಗಳಾದ ತಶಹ್ಹುದ್, ತಅವ್ವುಧ್ ಮತ್ತು ಸೂರಃ ಫಾತಿಹ ಪಠಿಸಿದ ನಂತರ ಹುಝೂರ್ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ಪಠಿಸಿದರು:

فَبِمَا رَحْمَةٍ مِّنَ اللّٰهِ لِنْتَ لَهُمْ ۚ وَلَوْ كُنْتَ فَظًّا غَلِيْظَ الْقَلْبِ لَانْفَضُّوْا مِنْ
حَوْلِكَ ۖ فَاعْفُ عَنْهُمْ وَاسْتَغْفِرْ لَهُمْ وَشَاوِرْهُمْ فِي الْاَمْرِ ۚ فَاِذَا عَزَمْتَ
فَتَوَكَّلْ عَلَى اللّٰهِ ؕ اِنَّ اللّٰهَ يُحِبُّ الْمُتَوَكِّلِيْنَ ○

ಈ ವಚನದ ಅರ್ಥ ಹೀಗಿದೆ: ಅಲ್ಲಾಹನ ಮಹತ್ತಾದ ಕಾರುಣ್ಯದಿಂದಲೇ ನೀನು ಅವರೊಂದಿಗೆ ಸೌಮ್ಯವಾಗಿ ವರ್ತಿಸುತ್ತಿರುವೆ. ನೀನು ಕ್ರೂರ ಸ್ವಭಾವಿಯೂ ಕಠಿಣ ಹೃದಯಿಯೂ ಆಗಿರುತ್ತಿದ್ದರೆ ಅವರು ನಿನ್ನ ಸುತ್ತಮುತ್ತಲಿನಿಂದ ಅಗಲಿ ಹೋಗುತ್ತಿದ್ದರು. ಆದ್ದರಿಂದ ನೀನು ಅವರಿಗೆ ಕ್ಷಮೆ ನೀಡು; ಅವರ ಪಾಪ ವಿಮುಕ್ತಿಗಾಗಿ ನೀನು ಪ್ರಾರ್ಥಿಸು ಹಾಗೂ ಪ್ರಧಾನ ಕಾರ್ಯಗಳಲ್ಲಿ ನೀನು ಅವರೊಡನೆ ಸಮಾಲೋಚನೆ ನಡೆಸು. ಹಾಗೆ ಯಾವುದೇ ಕಾರ್ಯ ತೀರ್ಮಾನಿಸಲ್ಪಟ್ಟರೆ ನೀನು ಅಲ್ಲಾಹನ ಮೇಲೆ ಭರವಸೆಯನ್ನಿಡು. ಖಂಡಿತವಾಗಿಯೂ ಅಲ್ಲಾಹನು ತನ್ನ ಮೇಲೆ ಭರವಸೆಯನ್ನಿಡುವವರನ್ನು ಪ್ರೀತಿಸುತ್ತಾನೆ. **(ಪವಿತ್ರ ಖುರ್‌ಆನ್, 3:160)**

ಈ ದಿನಗಳಲ್ಲಿ ಅನೇಕ ದೇಶಗಳಲ್ಲಿ ಜಮಾಅತಿನ ಮಜ್‌ಲಿಸ್ ಶೂರಾದ ಸಭೆಗಳು ನಡೆಯುತ್ತಿವೆ. ಕೆಲವು ದೇಶಗಳಲ್ಲಿ ನಡೆದಿವೆ ಮತ್ತು ಕೆಲವು ದೇಶಗಳಲ್ಲಿ ಈ ವಾರ ಅಥವಾ ಮುಂದಿನ ವಾರಗಳಲ್ಲಿ ನಡೆಯಲಿವೆ. ಜರ್ಮನಿಯಲ್ಲಿ ಇಂದಿನಿಂದ ನಡೆಯುವುದು.

ಶೂರಾದ ಮಹತ್ವ ಮತ್ತು ಪ್ರತಿನಿಧಿಗಳ ಹೊಣೆಗಾರಿಕೆಗಳ ಬಗ್ಗೆ ಮುಂಚೆಯೂ ನಾನು ಖುತ್ಬಗಳಲ್ಲಿ ಗಮನ ಸೆಳೆದಿದ್ದೇನೆ. ಅನೇಕ ವರ್ಷಗಳು ಕಳೆದ ನಂತರ ಇಂದು ಈ ಕುರಿತು ಪುನಃ ಅಲ್ಲಾಹನ ಆದೇಶ, ಹಝ್ರತ್ ಪೈಗಂಬರರ(ಸ) ಮಾದರಿ ಮತ್ತು ಜಮಾಅತಿನ ಸಂಪ್ರದಾಯಗಳು ಹಾಗೂ ರೀತಿಗಳ ಅನುಸಾರ ಕೆಲವು ಸಂಗತಿಗಳನ್ನು ಹೇಳುವುದು ಅನುಯೋಜ್ಯವೆಂದು ನನಗೆ ಅನಿಸಿತು. ಶೂರಾದ ಪ್ರತಿನಿಧಿಗಳ ಹೊಣೆಗಾರಿಕೆಗಳಿಗೆ ಸಂಬಂಧಿಸಿ ನೆನಪಿಡಬೇಕಾದ ಈ ಸಂಗತಿಗಳಿಂದ ಈಗಾಗಲೇ ಮಜ್ಲಿಸ್ ಶೂರಾಗಳು ನಡೆದಿರುವ ದೇಶಗಳ ಪ್ರತಿನಿಧಿಗಳು ಕೂಡ ಪ್ರಯೋಜನ ಪಡೆಯಬಹುದಾಗಿದೆ. ಏಕೆಂದರೆ ಮಜ್ಲಿಸ್ ಶೂರಾದ ಶಿಫಾರಸ್ಸುಗಳ ಬಗ್ಗೆ ಖ಼ಲೀಫತುಲ್ ಮಸೀಹರ ತೀರ್ಮಾನದ ನಂತರವೇ ಪ್ರತಿನಿಧಿಗಳ ಕೆಲವು ಹೊಣೆಗಾರಿಕೆಗಳು ಶುರುವಾಗುತ್ತವೆ. ಅವುಗಳನ್ನು ಈಡೇರಿಸುವುದು ಮತ್ತು ತಮ್ಮ ಪಾತ್ರವನ್ನು ವಹಿಸಿಕೊಳ್ಳುವುದು ಮಜ್ಲಿಸ್ ಶೂರಾದ ಪ್ರತಿಯೊಬ್ಬ ಸದಸ್ಯನ ಕಡ್ಡಾಯ ಕರ್ತವ್ಯವಾಗಿದೆ.

ಹೇಗಿದ್ದರೂ ಈ ಹೊಣೆಗಾರಿಕೆಗಳ ಬಗ್ಗೆ ಗಮನ ಸೆಳೆಯುವುದಕ್ಕೆ ಮುಂಚಿತವಾಗಿ ನಾನು ಪಠಿಸಿದ ಪವಿತ್ರ ಖುರ್‌ಆನಿನ ವಚನದ ಬೆಳಕಿನಲ್ಲಿ ಕೆಲವು ಸಂಗತಿಗಳನ್ನು ಹೇಳುತ್ತೇನೆ ಹಾಗೂ ಹಝ್ರತ್ ಪೈಗಂಬರರ(ಸ) ಮಾದರಿ ಮತ್ತು ಅವರ ವಿಧಾನವನ್ನು ವಿವರಿಸುತ್ತೇನೆ.

ಅಲ್ಲಾಹನ ವಿಶಿಷ್ಟ ಕೃಪೆಯಿಂದ ಹಝ್ರತ್ ಪೈಗಂಬರ್(ಸ) ತನ್ನ ಉಮ್ಮತಿನ ಮೇಲೆ ಅತ್ಯಂತ ಸೌಮ್ಯತೆ ತೋರಿಸುವವರಾಗಿದ್ದರು ಎಂದು ನಾನು ಪಠಿಸಿದ ವಚನದಲ್ಲಿ ರುಜುವಾತು ಮಾಡಲಾಗಿದೆ. ಅದರ ಜೊತೆಗೆ ಹಝ್ರತ್ ಪೈಗಂಬರರ(ಸ) ಮಹತ್ಕಾರ್ಯವನ್ನು ಮುಂದುವರೆಸುವ ಹೊಣೆಗಾರಿಕೆ ಮತ್ತು ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿಗಳ ಪ್ರಕಾರ ಅವರ ದಾಸ್ಯದಲ್ಲಿ ಬಂದ

ಹಝ್ರತ್ ಮಸೀಹ್ ಮೌಊದ್‌ರ[ಅ] ಕೆಲಸವನ್ನು ಈಡೇರಿಸುವ ಹೊಣೆಗಾರಿಕೆ ಯಾರಿಗೆ ಒಪ್ಪಿಸಲಾಗಿದೆಯೋ ಅವರು ಪ್ರೀತಿ ಮತ್ತು ಸ್ನೇಹಭಾವದಿಂದ ಕೆಲಸ ಮಾಡಬೇಕು ಎಂಬುವುದರ ಬಗ್ಗೆಯೂ ಈ ವಚನದಲ್ಲಿ ಗಮನ ಸೆಳೆಯಲಾಗಿದೆ.

ಸೌಮ್ಯತೆ ತೋರಿಸದಿದ್ದರೆ, ಕಠೋರ ಹೃದಯಿಗಳಾದರೆ, ಕೋಪಗೊಳ್ಳುತ್ತಿದ್ದರೆ ಈ ಜನರು ದೂರ ಹೋಗುವರು ಎಂದು ಅಲ್ಲಾಹನು ಹೇಳುತ್ತಾನೆ. ಆದ್ದರಿಂದ ತಪ್ಪುಗಳನ್ನು ಕಡೆಗಣಿಸಲು, ಅವರಿಗಾಗಿ ಕ್ಷಮೆಯಾಚನೆಯ ಪ್ರಾರ್ಥನೆ ಮಾಡಲು ಮತ್ತು ಸಮಾಲೋಚನೆ ನಡೆಸಲು ಅಲ್ಲಾಹನು ಆಜ್ಞಾಪಿಸುತ್ತಾನೆ. ಈ ತತ್ವ ಮತ್ತು ಪಾಠದ ಅನುಸಾರವಾಗಿ ಶೂರಾದ ಸಭೆಗಳನ್ನು ನಡೆಸಲಾಗುತ್ತವೆ. ಆದರೆ ಹೆಸರಿನಿಂದ ಸ್ಪಷ್ಟವಾಗುವ ಹಾಗೆ ಇದು ತೀರ್ಪು ನೀಡುವ ಸಭೆಯಲ್ಲ. ಬದಲಾಗಿ ಸಲಹೆ ನೀಡುವ ಸಭೆಯಾಗಿದೆ.

ಆದ್ದರಿಂದಲೇ ಸಮಾಲೋಚನೆ ನಡೆಸಿದ ನಂತರ ನೀನು ಮಾಡುವ ತೀರ್ಪಿನ ಪ್ರಕಾರ ಅಲ್ಲಾಹನ ಮೇಲೆ ಭರವಸೆ ಇರಿಸುತ್ತಾ ಕೆಲಸ ಮಾಡಬೇಕು ಎಂದು ಹೇಳಲಾಗಿದೆ. ಅಲ್ಲಾಹನ ಮೇಲೆ ಭರವಸೆ ಇಟ್ಟರೆ, ಅನಂತರ ಅದರ ಫಲಿತಾಂಶಗಳನ್ನು ಅಲ್ಲಾಹನು ಅತ್ಯಂತ ಅನುಗ್ರಹೀತಗೊಳಿಸುವನು ಎಂದು ತಿಳಿಸಲಾಗಿದೆ.

ತವಕ್ಕುಲಿನ (ಅಲ್ಲಾಹನ ಮೇಲೆ ಭರವಸೆ ಇಡುವುದರ) ಉನ್ನತ ಮಾದರಿ ಹಝ್ರತ್ ಪೈಗಂಬರರಲ್ಲಿ[ಸ] ಕಾಣಬಹುದಾಗಿದೆ.

ಹಝ್ರತ್ ಪೈಗಂಬರ್‌ರಿಗೆ[ಸ] ಅನೇಕ ವಿಷಯಗಳಲ್ಲಿ ಅಲ್ಲಾಹನ ಕಡೆಯಿಂದ ನೇರವಾಗಿ ಮಾರ್ಗದರ್ಶನ ಲಭಿಸುತ್ತಿತ್ತು. ಆದರೆ ಅಲ್ಲಾಹನ ಸ್ಪಷ್ಟವಾದ ಆದೇಶ ಇಲ್ಲದ ವಿಷಯಗಳಲ್ಲಿ ಹಝ್ರತ್ ಪೈಗಂಬರ್[ಸ] ಖಂಡಿತವಾಗಿಯೂ ಸಮಾಲೋಚನೆ ನಡೆಸುತ್ತಿದ್ದರು. ಜಮಾಅತಿನ ಹುದ್ದೇದಾರರು ಜಮಾಅತಿನ ಜನರೊಂದಿಗೆ ಹೇಗೆ ವರ್ತಿಸಬೇಕು ಮತ್ತು ನಾವು ಕೂಡ ಪರಸ್ಪರ ಸಮಾಲೋಚನೆ ನಡೆಸಬೇಕು ಎಂಬುದನ್ನು ಹಝ್ರತ್ ಪೈಗಂಬರರ[ಸ] ಕೃತ್ಯ ಮತ್ತು ಅಲ್ಲಾಹನ ಆದೇಶ ನಮಗೆ ತಿಳಿಸಿಕೊಡುತ್ತದೆ.

ಅಹ್ಮದಿಯಾ ಜಮಾಅತಿಗೆ ಅಲ್ಲಾಹನು ಖಿಲಾಫತ್ ಎಂಬ ಅನುಗ್ರಹವನ್ನು

ನೀಡಿರುವನು ಎಂಬುವುದು ಅಲ್ಲಾಹನ ಔದಾರ್ಯವಾಗಿದೆ. ಆದ್ದರಿಂದ ಖಲೀಫತುಲ್ ಮಸೀಹ್‌ರು ಕೂಡ ಅಲ್ಲಾಹನ ಆದೇಶ ಮತ್ತು ಹಝ್ರತ್ ಪೈಗಂಬರರ(ಸ) ನಡವಳಿಕೆ ಕ್ರಮದ ಪ್ರಕಾರ ಲೋಕದ ಜಮಾಅತುಗಳಿಂದ ಅಲ್ಲಿಯ ಸ್ಥಿತಿಗಳ ಅನುಸಾರವಾಗಿ ಸಲಹೆಗಳನ್ನು ಪಡೆಯುತ್ತಾರೆ.

ಅಲ್ಲಾಹನು ಬಯಸಿದ್ದರೆ ಪ್ರತಿಯೊಂದು ವಿಷಯದಲ್ಲಿ ಹಝ್ರತ್ ಪೈಗಂಬರ್‌ರಿಗೆ(ಸ) ಅವನು ಮಾರ್ಗದರ್ಶನ ಮಾಡಬಹುದಾಗಿತ್ತು. ಆದರೆ ಕೆಲವು ವಿಷಯಗಳಲ್ಲಿ ಸಮಾಲೋಚನೆ ನಡೆಸಲು ಹಝ್ರತ್ ಪೈಗಂಬರ್‌ರಿಗೆ(ಸ) ಅಲ್ಲಾಹನು ಆದೇಶ ನೀಡಿದನು. ಕೆಲವು ವಿಷಯಗಳಲ್ಲಿ ಹಝ್ರತ್ ಪೈಗಂಬರ್(ಸ) ಸಮಾಲೋಚನೆ ನಡೆಸಿರುವುದು ಸತ್ಯದಲ್ಲಿ ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸಲು, ಪರಸ್ಪರ ಸಮಾಲೋಚನೆ ಮತ್ತು ಸಹಕಾರದಿಂದ ಕೆಲಸ ಮಾಡಿಸಲು ಮತ್ತು ಸಮುದಾಯದಲ್ಲಿ ಒಗ್ಗಟ್ಟು ಉಂಟುಮಾಡಲಿಕ್ಕೆ ಆಗಿತ್ತು. ಇದು ಒಂದು ಹದೀಸಿನಿಂದ ಸ್ಪಷ್ಟವಾಗುತ್ತದೆ. ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ:

وَشَاوِرۡهُمۡ فِی الۡاَمۡرِ – **ಶಾವಿರ್‌ಹುಂ ಫಿಲ್ ಅಮ್‌ರಿ (ಪವಿತ್ರ ಖುರ್‌ಆನ್, 3:160)** ಎಂಬ ವಚನ ಅವತೀರ್ಣಗೊಂಡಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಮತ್ತು ಅವನ ಪ್ರವಾದಿಗೆ ಸಮಾಲೋಚನೆಯ ಆವಶ್ಯಕತೆಯಿಲ್ಲವಾದರೂ ಅಲ್ಲಾಹನು ಅದನ್ನು ನನ್ನ ಸಮುದಾಯಕ್ಕೆ ಕಾರುಣ್ಯವನ್ನಾಗಿ ಮಾಡಿರುವನು. ಆದ್ದರಿಂದ ಅವರಲ್ಲಿ ಯಾರು ಸಮಾಲೋಚನೆ ನಡೆಸುವರೋ ಅವರು ಸನ್ಮಾರ್ಗದಿಂದ ವಂಚಿತರಾಗಲಾರರು ಮತ್ತು ಯಾರು ಸಮಾಲೋಚನೆ ನಡೆಸುವುದಿಲ್ಲವೋ ಅವರು ಅವಮಾನದಿಂದ ರಕ್ಷಣೆ ಪಡೆಯಲಾರರು.

**(ಅಲ್‌ಜಾಮಿಉ ಲಿಶೂಬಿಲ್ ಈಮಾನ್; ಭಾಗ 10, ಪುಟ 41, ಪ್ರಕಾಶನ 2003)**

ಒಟ್ಟಿನಲ್ಲಿ ಹಝ್ರತ್ ಪೈಗಂಬರ್‌ರಿಗೆ(ಸ) ಈ ಸಮಾಲೋಚನೆಯ ಆವಶ್ಯಕತೆ ಇದ್ದಿರಲಿಲ್ಲ. ಆದಾಗ್ಯೂ ಉಮ್ಮತಿನ ಮುಂದೆ ಒಂದು ಮಾದರಿಯನ್ನು ತೋರಿಸಲು, ಅದರಿಂದ ಉಮ್ಮತ್ (ಮುಸ್ಲಿಂ ಸಮುದಾಯ) ಸದಾ ಅಲ್ಲಾಹನ ಕೃಪೆಯಿಂದ ಪಾಲು ಪಡೆಯುವಂತಾಗಲು, ಯಾವಾಗಲೂ ಸನ್ಮಾರ್ಗದ ಮಾರ್ಗಗಳಲ್ಲಿ ನಡೆಯುವಂತಾಗಲು ಮತ್ತು ಅವಮಾನದಿಂದ ಸುರಕ್ಷಿತರಾಗಿರಲಿಕ್ಕಾಗಿ ಅವರು

ಸಮಾಲೋಚನೆ ನಡೆಸುತ್ತಿದ್ದರು.

ನಮ್ಮಲ್ಲಿ ಶೂರಾದ ವ್ಯವಸ್ಥೆ ರೂಢಿಯಲ್ಲಿದೆ ಎಂಬುದು ನಮ್ಮ ಮೇಲೆ ಅಲ್ಲಾಹನ ವಿಶಿಷ್ಟ ಔದಾರ್ಯವಾಗಿದೆ. ಆದ್ದರಿಂದ ಅಲ್ಲಾಹನು ನಮಗಾಗಿ ಸನ್ಮಾರ್ಗದ ಏರ್ಪಾಡು ಮಾಡಿರುವನು ಎಂಬುವುದಕ್ಕೆ ಪ್ರತಿಯೊಬ್ಬ ಅಹ್ಮದೀ ಸಾಮಾನ್ಯವಾಗಿ ಮತ್ತು ಶೂರಾದ ಪ್ರತಿಯೊಬ್ಬ ಸದಸ್ಯ ವಿಶೇಷವಾಗಿ ಶೂರಾಗೆ ಬೆಲೆಕೊಡುತ್ತಾ ಅಲ್ಲಾಹನಿಗೆ ಕೃತಜ್ಞತೆ ತೋರಿಸಬೇಕಾಗಿದೆ.

ಹಝ್ರತ್ ಪೈಗಂಬರ್[(ಸ)] ಯಾವ ಸಂದರ್ಭಗಳಲ್ಲಿ ಸಮಾಲೋಚನೆ ನಡೆಸುತ್ತಿದ್ದರು ಮತ್ತು ಅವರ ಸಮಾಲೋಚನೆಯ ರೀತಿ ಏನಾಗಿತ್ತು ಎಂಬುದರ ಬಗ್ಗೆ ಚರಿತ್ರೆಯಿಂದ ತಿಳಿದುಬರುತ್ತದೆ. ಅದರ ಬಗ್ಗೆಯೂ ಹೇಳುತ್ತೇನೆ. ಅದೇ ವಿಧಾನವನ್ನು ಅವರ ನಾಲ್ವರು ಖಲೀಫರು ಕೂಡ ಮುಂದುವರೆಸಿದ್ದರು ಹಾಗೂ ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್[(ಅ)] ಸಹ ಅದನ್ನೇ ಪಾಲಿಸಿದರು.

ಚರಿತ್ರೆಯಲ್ಲಿ ಸಾಮಾನ್ಯವಾಗಿ ಸಮಾಲೋಚನೆಯ ಮೂರು ರೀತಿಗಳು ಕಾಣಬಹುದಾಗಿದೆ. **ಒಂದನೆಯದಾಗಿ,** ಸಮಾಲೋಚನೆ ನಡೆಸಬೇಕಾದ ಯಾವುದಾದರೂ ವಿಷಯವಿದ್ದರೆ, ಒಬ್ಬ ವ್ಯಕ್ತಿಯ ಮೂಲಕ ಘೋಷಿಸಿದ ನಂತರ ಜನರು ಒಟ್ಟು ಸೇರುತ್ತಿದ್ದರು. ಸಲಹೆ ಅಥವಾ ಸಮಾಲೋಚನೆ ನಡೆಸಲಾದ ನಂತರ ಹಝ್ರತ್ ಪೈಗಂಬರ್[(ಸ)] ಅಥವಾ ಖಲೀಫರು ತೀರ್ಮಾನ ಮಾಡುತ್ತಿದ್ದರು. ಆ ಕಾಲದಲ್ಲಿ ಸರದಾರರ ವ್ಯವಸ್ಥೆ ಇತ್ತು. ಆದ್ದರಿಂದ ಸಾಮಾನ್ಯವಾಗಿ ಗೋತ್ರಗಳ ಅನೇಕ ಜನರು ಒಟ್ಟು ಸೇರುತ್ತಿದ್ದರು. ಆದರೆ ಅಭಿಪ್ರಾಯವನ್ನು ಸರದಾರ ಅಥವಾ ನೇತಾರ ಮಾತ್ರ ನೀಡುತ್ತಿದ್ದರು. ನಮ್ಮ ಸರದಾರ ಅಥವಾ ನೇತಾರ ಸಲಹೆ ಕೊಟ್ಟರು ಎಂಬುದನ್ನು ಜನರು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದರು. ಮಾತ್ರವಲ್ಲ ಆ ಕಾಲದಲ್ಲಿ ರೂಢಿಗೆ ವಿರುದ್ಧವಾಗಿ ಯಾರಾದರೂ ಆವೇಶಗೊಂಡು ತಮ್ಮ ಅಭಿಪ್ರಾಯವನ್ನು ನೀಡಲು ಪ್ರಯತ್ನಿಸಿದರೂ ಕೂಡ ಹಝ್ರತ್ ಪೈಗಂಬರ್[(ಸ)] ಹೀಗೆ ಹೇಳುತ್ತಿದ್ದರು: ಮುಂದೆ ಬಂದು ಅಭಿಪ್ರಾಯವನ್ನು ನೀಡಲು ನಿಮ್ಮ ನೇತಾರನೊಡನೆ ಹೇಳಿರಿ. ನಿಮ್ಮ ಮಾತಿಗೆ ಅಷ್ಟು ಪ್ರಾಮುಖ್ಯತೆ ಲಭಿಸಲಿಕ್ಕಿಲ್ಲ. ಇದಾಗಿತ್ತು ವಿಧಾನ.

**ಎರಡನೆಯ ರೀತಿ,** ಸಮಾಲೋಚನೆ ನಡೆಸಲು ಯೋಗ್ಯರಾದ ಕೆಲವರನ್ನು ಮಾತ್ರ ಹಝ್ರತ್ ಪೈಗಂಬರ್[ಸ] ಕರೆಯುತ್ತಿದ್ದರು. ಎಲ್ಲರನ್ನು ಕರೆಯುತ್ತಿರಲಿಲ್ಲ. ಅನಂತರ ಆ ಕೆಲವು ಜನರ ಸಭೆಯಿಂದ ಸಲಹೆ ಪಡೆಯುತ್ತಿದ್ದರು.

ಮೂರನೇ ರೀತಿ, ಎರಡು ಮಂದಿ ಕೂಡ ಒಟ್ಟು ಸೇರಬಾರದು ಎಂದು ಹಝ್ರತ್ ಪೈಗಂಬರ್[ಸ] ಭಾವಿಸುತ್ತಿದ್ದ ಸಂದರ್ಭದಲ್ಲಿ ಒಬ್ಬೊಬ್ಬರನ್ನು ಕರೆದು ಸಲಹೆ ಪಡೆಯುತ್ತಿದ್ದರು.

**(ಖಿತಾಬಾತೆ ಶೂರಾ, ಭಾಗ 1, ಪುಟ 6–7; ಮಜ್ಲಿಸ್ ಮುಶಾವಿರತ್ 1922)**

ಹೇಗಿದ್ದರೂ ಈ ಮೂರು ರೀತಿಗಳಲ್ಲಿ ಹಝ್ರತ್ ಪೈಗಂಬರ್[ಸ] ಸಮಾಲೋಚನೆ ನಡೆಸುತ್ತಿದ್ದರು. ಅವರ ನಾಲ್ವರು ಖಲೀಫರು ಸಹ ಇದರ ಪ್ರಕಾರವೇ ಸಮಾಲೋಚನೆ ನಡೆಸುತ್ತಿದ್ದರು. ನಾನು ವಿವರಿಸಿದಂತೆ ಅಲ್ಲಾಹನು ಮತ್ತು ಅವನ ಪ್ರವಾದಿಗೆ ಸಮಾಲೋಚನೆ ನಡೆಸಬೇಕಾದ ಆವಶ್ಯಕತೆ ಇಲ್ಲ. ಹೀಗಿದ್ದರೂ ಹಝ್ರತ್ ಪೈಗಂಬರ್[ಸ] ಅನೇಕ ಸಂದರ್ಭಗಳಲ್ಲಿ ಸಮಾಲೋಚನೆ ನಡೆಸುತ್ತಿದ್ದರು ಎಂದು ಚರಿತ್ರೆಯಿಂದ ನಮಗೆ ತಿಳಿದುಬರುತ್ತದೆ. ಮಾತ್ರವಲ್ಲ ಹಝ್ರತ್ ಪೈಗಂಬರ್[ಸ] ಬಹಳ ಹೆಚ್ಚಾಗಿ ಸಹಾಬಿಯರೊಂದಿಗೆ ಸಮಾಲೋಚನೆ ನಡೆಸುತ್ತಿದ್ದರು.

ಹಝ್ರತ್ ಅಬೂಹುರೈರ[ರ] ಹೇಳುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಹೆಚ್ಚಾಗಿ ತನ್ನ ಸಹಾಬಿಯರಿಂದ ಸಲಹೆ ಪಡೆಯುವವರನ್ನಾಗಿ ನಾನು ಯಾರನ್ನೂ ಕಂಡಿಲ್ಲ.

**(ಸುನನ್ ತಿರ್ಮಿಧಿ ಅಬ್ವಾಬುಲ್ ಜಿಹಾದ್, ಬಾಬ್ ಮಾ ಜಾಅ ಫಿಲ್ ಮಶ್ವರತಿ, ಹದೀಸ್ 1714)**

ಇವೆಲ್ಲವೂ ಏಕೆಂದರೆ, ಅಲ್ಲಾಹನಿಂದ ನೇರವಾಗಿ ಮಾರ್ಗದರ್ಶನ ಗಳಿಸುತ್ತಿದ್ದ ಹಝ್ರತ್ ಪೈಗಂಬರ್[ಸ] ಕೂಡ ಸಮಾಲೋಚನೆ ನಡೆಸುತ್ತಿರುವಾಗ, ಸಮಾಲೋಚನೆಯ ಪ್ರಾಮುಖ್ಯವನ್ನು ಮನವರಿಕೆ ಮಾಡಲು ನೀವೆಷ್ಟು ಪ್ರಯತ್ನಿಸಬೇಕು ಎಂಬುದನ್ನು ತಿಳಿಸಿಕೊಡಲಿಕ್ಕಾಗಿದೆ. ಹಝ್ರತ್ ಪೈಗಂಬರರ[ಸ] ಸಮಾಲೋಚನೆಯ ಒಂದು ಘಟನೆ ವಿವರಿಸುತ್ತೇನೆ. ಅದರ ಬಗ್ಗೆ ಒಂದು ವರದಿಯಿದೆ.

ಹಝ್ರತ್ ಮುಆಧ್ ಬಿನ್ ಜಬಲ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ನನ್ನನ್ನು ಯಮನಿಗೆ ಕಳುಹಿಸಲು ತೀರ್ಮಾನಿಸಿದಾಗ ಅವರು ಅನೇಕ ಸಹಾಬಿಯರಿಂದ ಸಲಹೆ ಪಡೆದರು. ಅವರಲ್ಲಿ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ತಲ್‌ಹ(ರ), ಹಝ್ರತ್ ಝುಬೇರ್(ರ) ಮತ್ತು ಅನೇಕ ಸಹಾಬಿಯರು ಒಳಪಡುತ್ತಾರೆ. ಹಝ್ರತ್ ಅಬೂಬಕರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ನಮ್ಮೊಡನೆ ಸಲಹೆ ಕೇಳದೇ ಇದ್ದರೆ ನಾವು ಏನೂ ಹೇಳುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾವ ವಿಷಯಗಳ ಬಗ್ಗೆ ನನಗೆ ದಿವ್ಯವಾಣಿ ಲಭಿಸುವುದಿಲ್ಲವೋ ಅವುಗಳ ಕುರಿತು ನಾನು ನಿಮ್ಮ ಹಾಗೆಯೇ ಆಗಿರುತ್ತೇನೆ. ಹೀಗೆ ಪ್ರತಿಯೊಬ್ಬರು ತಮ್ಮ ತಮ್ಮ ಸಲಹೆಗಳನ್ನು ನೀಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಮುಆಧ್ ನೀವು ಹೇಳಿರಿ, ನಿಮ್ಮ ಅಭಿಪ್ರಾಯವೇನು? ನಾನು ಹೇಳಿದೆ: ನನ್ನದು ಹಝ್ರತ್ ಅಬೂಬಕರ್‌ರದ್ದೇ ಅಭಿಪ್ರಾಯವಾಗಿದೆ.

**(ಅಲ್ ಮೂಜಮುಲ್ ಕಬೀರ್ ಲಿಲ್ ತಬ್ರಾನಿ, ಭಾಗ 20, ಪುಟ 67, ಹದೀಸ್ 124, ಪ್ರಕಾಶನ: ದಾರೆ ಅಹ್ಯಾ ಅತ್ತುರಾಸುಲ್ ಅರಬೀ ಬೇರೂತ್)**

ಇದು ಹಝ್ರತ್ ಪೈಗಂಬರ್‌ರ(ಸ) ಸರಳತೆ, ವಿನಯವಂತಿಕೆ ಮತ್ತು ಸಮಾಲೋಚನೆಯ ಪ್ರಾಮುಖ್ಯವನ್ನು ತಿಳಿಸಿಕೊಡುತ್ತದೆ. ಮಾತ್ರವಲ್ಲ ನಾವು ಸಮಾಲೋಚನೆಗೆ ಎಷ್ಟು ಪ್ರಾಧಾನ್ಯ ನೀಡಬೇಕೆಂಬುದಕ್ಕೆ ನಮಗೆ ಉತ್ತಮ ಮಾದರಿಯಾಗಿದೆ. ಸಹಾಬಿಯರು ಹಝ್ರತ್ ಪೈಗಂಬರ್‌ರ(ಸ) ಆದೇಶ ಪ್ರಕಾರ ತಮ್ಮ ಯೋಗ್ಯತೆ ಮತ್ತು ಅನುಭವದ ಪ್ರಕಾರ ದೇವಭಕ್ತಿಯೊಂದಿಗೆ ಸಲಹೆ ನೀಡುತ್ತಿದ್ದರು

ಮದೀನಗೆ ವಲಸೆ ಹೋದ ನಂತರವೂ ಮಕ್ಕಾದ ಸತ್ಯನಿಷೇಧಿಗಳು ಮುಸ್ಲಿಮರ ಶಾಂತಿ ಮತ್ತು ನೆಮ್ಮದಿಯನ್ನು ಹಾಳು ಮಾಡಲು ಪ್ರಯತ್ನಿಸಿದಾಗ ಹಝ್ರತ್ ಪೈಗಂಬರ್(ಸ) ಅದನ್ನು ತಡೆಯುವುದಕ್ಕಾಗಿ ಸಹಾಬಿಯರೊಂದಿಗೆ ಸಮಾಲೋಚನೆ ನಡೆಸಿದರು. ಅನ್ಸಾರ್ (ಮದೀನದ ಮುಸ್ಲಿಮರು) ಸರದಾರರನ್ನು ಕೂಡ ಈ ಸಮಾಲೋಚನೆಯಲ್ಲಿ ಸೇರಿಸಿದ್ದರು ಮತ್ತು ಮುಹಾಜಿರ್ (ಮಕ್ಕಾದ ಮುಸ್ಲಿಮರು) ಸರದಾರರನ್ನು ಕೂಡ ಅದರಲ್ಲಿ ಸೇರಿಸಿದರು. ಅನಂತರ ಮುಹಾಜಿರ್ ಹಾಗೂ

ಅನ್ಸಾರ್ ನೇತಾರರ ಸಲಹೆ ಮತ್ತು ಒಪ್ಪಿಗೆಯೊಂದಿಗೆ ಬದ್ರ್ ಮೈದಾನದ ಕಡೆಗೆ ಹೊರಟರು. ಈ ಸಮಾಲೋಚನೆ ವೇಳೆ ಅನ್ಸಾರ್ ಸರದಾರರು ತೋರಿಸಿದ ಪ್ರಾಮಾಣಿಕತೆ ಮತ್ತು ನಿಷ್ಠೆಯ ಮಾದರಿ ಹಾಗೂ ಅವರು ಮಾಡಿದ ಪ್ರತಿಜ್ಞೆಯಿಂದ ಹಝ್ರತ್ ಪೈಗಂಬರ್(ಸ) ಬಹಳ ಸಂತೋಷಪಟ್ಟರು ಮತ್ತು ಅವರಿಗೆ ಅದರಿಂದ ನೆಮ್ಮದಿಯಾಯಿತು.

**(ಸೀರತ್ ಖಾತಮುನ್ನಬಿಯ್ಯೀನ್ –**
**ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ. ಎ., ಪುಟ 354–355)**

ಆದ್ದರಿಂದ ಸಲಹೆ ನೀಡುವುದು ಮತ್ತು ಸಮಾಲೋಚನೆ ನಡೆಸುವುದು ಅಷ್ಟಕ್ಕೆ ಪರಿಮಿತಗೊಳ್ಳಬಾರದು. ಬದಲಾಗಿ ಸಲಹೆ ನೀಡುವವರ ಕೃತ್ಯ ಮತ್ತು ವರ್ತನೆ ಹೇಗಿರಬೇಕು ಎಂದರೆ, ಮೊತ್ತಮೊದಲಾಗಿ ಅವರು ಸ್ವತಃ ಅದರಂತೆ ವರ್ತಿಸುವುದಾಗಿ ಮತ್ತು ಅದನ್ನು ಪಾಲಿಸುವುದಾಗಿ ಪ್ರತಿಜ್ಞೆ ಮಾಡಬೇಕು. ಪಾಲಿಸುವುದಾಗಿ ಪ್ರತಿಜ್ಞೆ ಮಾಡುವುದಿಲ್ಲವೆಂದಾದರೆ ಮತ್ತು ನಿಜವಾಗಿಯೂ ಅದರ ಪ್ರಕಾರ ನಡೆಯವುದಿಲ್ಲವೆಂದಾದರೆ ಸಮಾಲೋಚನೆ ನಿರುಪಯುಕ್ತ.

ಬದ್ರ್ ಮೈದಾನದಲ್ಲಿಯೂ ಹಝ್ರತ್ ಪೈಗಂಬರ್‌ರಿಗೆ(ಸ) ಸಲಹೆ ನೀಡಿದ ನಂತರ ಅದರ ಪ್ರಕಾರ ಸಹಾಬಿಯರು ಹೇಗೆ ನಡೆದುಕೊಂಡರು ಎಂದು ನಮಗೆ ಗೊತ್ತಿದೆ. ಸಮಾಲೋಚನೆ ನಡೆಸಿದ ನಂತರ ಜೀವತ್ಯಾಗ ಮಾಡಲು ಕೂಡ ಅವರು ತಯಾರಾದರು. ಆದ್ದರಿಂದ ಶೂರಾದ ನಮ್ಮ ಸದಸ್ಯರು ಸಹ ನೆನಪಿಡಬೇಕಾದ ಸಂಗತಿ ಏನೆಂದರೆ, ಸಲಹೆಗಳ ಮತ್ತು ತೀರ್ಮಾನಗಳ ಮಂಜೂರಾತಿಯ ನಂತರ ಮೊತ್ತಮೊದಲಾಗಿ ಅದನ್ನು ಕಾರ್ಯಗತಗೊಳಿಸಲು ಎಲ್ಲ ವಿಧದ ತ್ಯಾಗಗಳನ್ನು ಮಾಡಲು ತಮ್ಮನ್ನು ಸ್ವತಃ ತಯಾರು ಮಾಡಬೇಕು. ಅಥವಾ ಖಲೀಫತುಲ್ ಮಸೀಹರು ಮಾಡುವ ತೀರ್ಮಾನಗಳನ್ನು ಕಾರ್ಯಗತಗೊಳಿಸಲು ಮೊತ್ತಮೊದಲಾಗಿ ಎಲ್ಲ ತ್ಯಾಗಗಳನ್ನು ಮಾಡಬೇಕು.

ನೀವು ನಿಮ್ಮ ಮಾದರಿಯನ್ನು ತೋರಿಸಿದರೆ ಜಮಾಅತಿನ ಇತರ ಸದಸ್ಯರು ಕೂಡ ಸಂತೋಷದಿಂದ ಅದನ್ನು ಪಾಲಿಸಲು ಎಲ್ಲ ವಿಧದ ತ್ಯಾಗಗಳನ್ನು ಮಾಡಲು ಸಿದ್ಧರಾಗುವರು. ಪ್ರತಿಯೊಬ್ಬ ಅಹ್ಮದಿಯು ಖಿಲಾಫತ್‌ನೊಂದಿಗೆ ನಿಷ್ಠೆ ಮತ್ತು ಅನುಸರಣೆಯ ಪ್ರತಿಜ್ಞೆಯನ್ನು ಮಾಡಿರುವಾಗ ಅತ್ಯಂತ ಉನ್ನತವಾದ

ಮಾದರಿಯನ್ನು ಹುದ್ದೇದಾರರು ಮತ್ತು ಶೂರಾದ ಸದಸ್ಯರು ತೋರಿಸಬೇಕು ಎಂಬುದನ್ನು ನೆನಪಿಡಬೇಕು. ಏಕೆಂದರೆ ಅವರನ್ನು ಖಿಲಾಫತ್ ಮತ್ತು ಜಮಾಅತಿನ ವ್ಯವಸ್ಥೆಯ ಸಹಾಯಕ ವಿಭಾಗವಾದ ಮಜ್ಲಿಸ್ ಶೂರಾದ ಸದಸ್ಯರನ್ನಾಗಿ ಮಾಡಲಾಗಿದೆ.

ಹಝ್ರತ್ ಪೈಗಂಬರರ(ಸ) ಸುನ್ನತನ್ನು (ಚರ್ಯೆ, ರೀತಿ) ಪಾಲಿಸುತ್ತಾ ಮುಖ್ಯವಾದ ಕಾರ್ಯಗಳಲ್ಲಿ ಸಮುದಾಯದ ಜನರಿಂದ ಸಲಹೆಯನ್ನು ಪಡೆಯಬೇಕು ಹಾಗೂ ಸೌಮ್ಯವಾಗಿ ಇರಲು ಮತ್ತು ಪ್ರಾರ್ಥನೆಯನ್ನು ಮಾಡಲು ಕಾಲಘಟ್ಟದ ಖ಼ಲೀಫರಿಗೆ ಆದೇಶ ನೀಡಲಾಗಿದೆ. ಅದೇ ರೀತಿಯಲ್ಲಿ ಸಲಹೆ ನೀಡುವವರು ಸದುದ್ದೇಶ ಮತ್ತು ತಖ್ವಾದಲ್ಲಿ ನಡೆಯುತ್ತಾ ಸಲಹೆ ನೀಡಬೇಕಾಗಿದೆ. ಆದ್ದರಿಂದ ಸಲಹೆ ನೀಡುವವರ ಸಲಹೆಗಳು ಸದುದ್ದೇಶ ಮತ್ತು ದೇವಭಕ್ತಿಯ ಉನ್ನತ ಮಟ್ಟಗಳ ಅನುಸಾರವಾಗಿ ಇರಬೇಕು ಎಂಬುದನ್ನು ನೆನಪಿಡಬೇಕು. ಈ ರೀತಿಯಲ್ಲಿ ಸಲಹೆಗಾರರದ್ದು ಬಹಳ ದೊಡ್ಡ ಹೊಣೆಗಾರಿಕೆಯಾಗಿದೆ. ಅವರ ದೇವಭಕ್ತಿಯ ಮಟ್ಟ ಹೇಗಿದೆ ಎಂದು ಅವರು ಸ್ವತಃ ನೋಡಬೇಕಾಗಿದೆ. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಒಂದು ವರದಿ ಇದನ್ನು ಬಹಳ ಸ್ಪಷ್ಟವಾಗಿ ತಿಳಿಸುತ್ತಿದೆ. ಹಝ್ರತ್ ಅಲಿ(ರ) ಹೇಳುತ್ತಾರೆ:

شَاوِرُوْاالْفُقَهَاءَوَالْعَابِدِيْنَ - **ಶಾವಿರುಲ್ ಘುಖಹಾಅ ವಲ್ ಆಬಿದೀನ್** – ಎಂದರೆ ವಿವೇಕವಂತರೂ ಆರಾಧಕರೂ ಆಗಿರುವವರೊಡನೆ ಸಮಾಲೋಚನೆ ನಡೆಸಿರಿ. ಪ್ರತಿಯೊಬ್ಬರಿಂದಲ್ಲ.

**(ಕಂಝುಲ್ ಉಮ್ಮಾಲ್, ಭಾಗ 3, ಪುಟ 411, ಹದೀಸ್ 7191, ಪ್ರಕಾಶನ: ಮುಅಸ್ಸಿಸತುರ್ರಿಸಾಲ ಬೇರೂತ್ 1985)**

ಪ್ರತಿನಿಧಿಗಳ ಮಟ್ಟ ಇದಾಗಿರಬೇಕು. ಪ್ರತಿನಿಧಿಗಳನ್ನು ಆಯ್ಕೆ ಮಾಡುವವರಿಗೂ ಇದರಲ್ಲಿ ಉಪದೇಶವಿದೆ. ಸಲಹೆ ನೀಡಬಲ್ಲವರೂ ಧಾರ್ಮಿಕ ಅರಿವಿನಲ್ಲಿ ಉತ್ತಮರೂ ಆರಾಧನೆಯ ಮಟ್ಟದಲ್ಲಿ ಉತ್ತಮರೂ ಆಗಿರುವವರನ್ನು ತಮ್ಮವರಿಂದ ಆಯ್ಕೆ ಮಾಡಬೇಕು. ಈ ಮಟ್ಟವನ್ನು ಗಮನದಲ್ಲಿಟ್ಟುಕೊಂಡು ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುವಾಗ ಒಂದು ಪ್ರತ್ಯೇಕವಾದ ವ್ಯತ್ಯಾಸ ಕಂಡುಬರುವುದಾಗಿ ನಾನು ನೋಡಿದ್ದೇನೆ. ಒಬ್ಬನ ಬಗ್ಗೆ ಉತ್ತಮ ಭಾವನೆ ಹೊಂದಿಕೊಂಡು ಜನರು

ಆತನನ್ನು ಶೂರಾದ ಪ್ರತಿನಿಧಿಯನ್ನಾಗಿ ಮಾಡಿರುವಾಗ, ಜನರ ಉತ್ತಮ ಭಾವನೆಯ ಪ್ರಕಾರ ನಡೆಯುವುದು ಪ್ರತಿನಿಧಿಗಳ ಜವಾಬ್ದಾರಿಯಾಗಿದೆ. ಒಂದು ದಿನದಲ್ಲಿ ಅಥವಾ ಕೆಲವು ವಾರಗಳಲ್ಲಿ ಜ್ಞಾನದ ಉನ್ನತ ಮಟ್ಟವನ್ನು ಮತ್ತು ಧರ್ಮದ ಆಳವನ್ನು ಅರಿಯಲು ಸಾಧ್ಯವಲ್ಲ. ಆದರೆ ದೇವಭಕ್ತಿಯಲ್ಲಿ ನಡೆಯುತ್ತಾ ತಮ್ಮ ಸಲಹೆಯನ್ನು ಎಲ್ಲ ವಿಧದ ಸ್ವಾರ್ಥ ಉದ್ದೇಶಗಳನ್ನು ಬಿಟ್ಟುಕೊಂಡು ಪ್ರತಿಯೊಬ್ಬರಿಗೂ ನೀಡಬಹುದಾಗಿದೆ. ಅದೇ ರೀತಿಯಲ್ಲಿ ಅಲ್ಲಾಹನ ಮುಂದೆ ಬಾಗುತ್ತಾ, ಅವನಿಂದ ಸಹಾಯವನ್ನು ಬೇಡುತ್ತಾ, ದುಆದೊಂದಿಗೆ ಶೂರಾ ನಡೆಯುವ ಸ್ಥಳಗಳಲ್ಲಿ ಅಲ್ಲಿಯ ಪ್ರತಿನಿಧಿಗಳು ತಮ್ಮ ಸಲಹೆಯನ್ನು ನೀಡಬೇಕು.

ಯಾವನಾದರೂ ಭಾಷಣಗಾರರ ಭಾಷಣದಿಂದ ಪ್ರಭಾವಿತಗೊಂಡು, ಯಾರದಾದರೂ ಸಂಬಂಧ ಅಥವಾ ಗೆಳೆತನದ ಕಾರಣದಿಂದ ತಮ್ಮ ಸಲಹೆಯನ್ನು ಇತರರ ಸಲಹೆಯಂತೆ ಮಾಡಬಾರದು. ಅದೇ ರೀತಿಯಲ್ಲಿ ಯಾರದಾದರೂ ಭಯದಿಂದ ಅಥವಾ ಮುಲಾಜಿಗಾಗಿ ತಮ್ಮ ಸಲಹೆಯನ್ನು ಬದಲಿಸಬಾರದು. ಬದಲಾಗಿ ದೇವಭಯವನ್ನು ಮುಂದಿರಿಸುತ್ತಾ ಜಮಾಅತಿನ ಹಿತಕ್ಕೆ ಪ್ರತಿಯೊಂದು ಸಂಗತಿಯ ಮೇಲೆ ಆದ್ಯತೆ ನೀಡುತ್ತಾ ಸಲಹೆ ನೀಡಿದರೆ ಮಾತ್ರ ನಿಜವಾಗಿಯೂ ನೀವು ನಿಮ್ಮ ಪ್ರಾತಿನಿಧ್ಯದ ಹಕ್ಕನ್ನು ಈಡೇರಿಸುವವರಾಗುವಿರಿ.

ಅಲ್ಲಾಹನು ನಮ್ಮ ಹೃದಯಗಳ ಸ್ಥಿತಿಯನ್ನು ಕೂಡ ಅರಿತಿರುವನು ಮತ್ತು ನಮ್ಮ ಪ್ರತಿಯೊಂದು ಕೃತ್ಯವನ್ನು ಕೂಡ ನೋಡುತ್ತಿರುವನು ಎಂಬುದನ್ನು ಸದಾ ನೆನಪಿನಲ್ಲಿಡಬೇಕು. ಅಲ್ಲಾಹನ ಸಂಪ್ರೀತಿಯನ್ನು ಮುಂದಿರಿಸುತ್ತಾ ಕೆಲಸ ಮಾಡದೇ ಇದ್ದು ಅಲ್ಲಾಹನ ಕೋಪಕ್ಕೆ ಪಾತ್ರನಾಗಬಾರದು ಎಂಬುದನ್ನು ನೆನಪಿನಲ್ಲಿಡಬೇಕು. ಅದೇ ರೀತಿಯಲ್ಲಿ ಶೂರ ನಡೆದ ಜಾಗಗಳಲ್ಲಿ ಶೂರಾ ಸದಸ್ಯರು ಈಗ ತಮ್ಮ ಹಕ್ಕುಗಳನ್ನು ಈಡೇರಿಸಬೇಕು. ಅದು ಹೇಗೆಂದರೆ, ತಮ್ಮ ಆಧ್ಯಾತ್ಮಿಕ ಮತ್ತು ಕರ್ಮಪರವಾದ ಸ್ಥಿತಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ತಮ್ಮ ಕೃತ್ಯರೂಪದ ಮಾದರಿಯನ್ನು ಸಾಗಿಸಲು ಪ್ರತಿಜ್ಞೆ ಮಾಡಬೇಕು. ಆಗಿರುವ ಮತ್ತು ಆಗಲಿರುವ ತೀರ್ಮಾನಗಳನ್ನು ದೇವಭಕ್ತಿಯಲ್ಲಿ ನಡೆಯುತ್ತಾ ಪಾಲಿಸಲು ಮತ್ತು ಇತರರನ್ನು ಪಾಲಿಸುವಂತೆ ಮಾಡಲು ಪ್ರಯತ್ನಿಸಬೇಕು.

ನಾವು ಈ ಅವಸ್ಥೆಯನ್ನು ಉಂಟುಮಾಡುವಾಗಲೇ ನಾವು ಅಲ್ಲಾಹನ ಕಾರುಣ್ಯವನ್ನು ಸೆಳೆಯುವವರಾಗುವೆವು ಮತ್ತು ನಮ್ಮ ತೀರ್ಮಾನಗಳಲ್ಲಿ ಅನುಗ್ರಹ ಉಂಟಾಗುವುದು. ಇಲ್ಲದಿದ್ದರೆ ನಾವು ಒಟ್ಟುಗೂಡುವುದು ಮತ್ತು ತಮ್ಮ ಸಲಹೆಗಾಗಿ ಶಕ್ತವಾದ ಭಾಷಣಗಳನ್ನು ಮಾಡುವುದು ದೇವಭಯವಿಲ್ಲದ ಲೌಕಿಕ ಅಸೆಂಬ್ಲಿಯ ಸದಸ್ಯರಂತೆ ಆಗುವುದು. ಅವರ ತೀರ್ಮಾನಗಳು ಕೆಲವೊಮ್ಮೆ ಸ್ವಭಾವಗಳನ್ನೇ ನಾಶಮಾಡುವಂಥದ್ದು ಮತ್ತು ಅಲ್ಲಾಹನ ಆಜ್ಞೆಗಳ ವಿರುದ್ಧವು ಆಗಿರುತ್ತವೆ. ಅವುಗಳಲ್ಲಿ ತಮ್ಮ ಪಾರ್ಟಿಯ ಉದ್ದೇಶಗಳನ್ನು ಮುಂದಿರಿಸಲಾಗುತ್ತದೆ. ಕೆಲವೊಮ್ಮೆ ಅಂತಹ ತೀರ್ಮಾನಗಳ ದುಷ್ಪರಿಣಾಮಗಳು ಬೇಗನೇ ಹೊರಗೆ ಬರುತ್ತವೆ. ಅವುಗಳು ಶಾಂತಿ ಮತ್ತು ನೆಮ್ಮದಿಯನ್ನು ಕೆಡವಿ ಹಾಕುವಂಥದ್ದಾಗಿರುತ್ತವೆ. ಕೆಲವೊಮ್ಮೆ ತಡವಾಗಿಯೂ ಅವುಗಳ ಪರಿಣಾಮಗಳು ಹೊರಗೆ ಬರುತ್ತವೆ. ಆದರೆ ಅನುಗ್ರಹ ಅವುಗಳಲ್ಲಿ ಅಲ್ಪ ಮಾತ್ರವೂ ಇರುವುದಿಲ್ಲ. ಹೇಗಿದ್ದರೂ ಅಲ್ಲಾಹನ ಕಾನೂನು ಮತ್ತು ಆಜ್ಞೆಗಳ ವಿರುದ್ಧವಾಗಿರುವ ತೀರ್ಮಾನಗಳು ಕೊನೆಗೆ ಕೋಮುಗಳ ನಾಶಕ್ಕೆ ಕಾರಣವಾಗುವುವು.

ಆದ್ದರಿಂದ ಲೌಕಿಕರ ಸ್ಥಿತಿಗಳನ್ನು ನೋಡಿಯಾದರೂ ನಾವು ನಮ್ಮ ಸ್ಥಿತಿಗಳನ್ನು ಉತ್ತಮಗೊಳಿಸುವುದರ ಬಗ್ಗೆ ಗಮನಹರಿಸಬೇಕು. ನಾನು ಹೇಳಿದಂತೆ ಶೂರಾದ ಸದಸ್ಯರ ಸಲಹೆಗಳನ್ನು ಖ಼ಲೀಫತುಲ್ ಮಸೀಹರ ಸನ್ನಿಧಿಯಲ್ಲಿ ಇರಿಸಲಾಗುತ್ತವೆ. ಖ಼ಲೀಫತುಲ್ ಮಸೀಹ್ ಹೇಳಿದ ಕಾರಣದಿಂದಲೇ ಶೂರಾವನ್ನು ನಡೆಸಲಾಗುತ್ತದೆ. ಆದ್ದರಿಂದ ಮಜ್ಲಿಸೇ ಶೂರಾವು ಖಿ಼ಲಾಫತಿನ ಸಹಾಯಕ ಸಭೆ ಆಗಿದೆ ಎಂಬುದನ್ನು ಸದಾ ನೆನಪಿನಲ್ಲಿಡಬೇಕು. ಅದು ತನ್ನ ಪ್ರಾಮುಖ್ಯವನ್ನು ಸದಾ ಮುಂದಿರಿಸಬೇಕು. ಆದ್ದರಿಂದ ಮಜ್ಲಿಸ್ ಶೂರಾಗೆ ಖಿ಼ಲಾಫತಿನ ನಂತರ ಬಹಳ ಪ್ರಾಮುಖ್ಯವಿದೆ. ಶೂರಾಗಾಗಿ ಆಯ್ಕೆಗೊಳ್ಳುವ ಪ್ರತಿಯೊಬ್ಬ ಸದಸ್ಯ ಒಂದು ವರ್ಷಕ್ಕೆ ಸದಸ್ಯನಾಗಿರುತ್ತಾನೆ. ಸದಸ್ಯರು ತಮ್ಮ ಈ ಪ್ರಾಮುಖ್ಯವನ್ನು ಸದಾ ಮುಂದಿರಿಸಬೇಕು. ಶೂರಾದ ಕಾರ್ಯಸೂಚಿಗಳು (ಅಜೆಂಡ) ಮತ್ತು ಸಮಾಲೋಚನೆಗಳಿಂದಲೇ ಖ಼ಲೀಫತುಲ್ ಮಸೀಹರಿಗೆ ವಿವಿಧ ದೇಶಗಳಲ್ಲಿ ಇರುವ ಸಮಸ್ಯೆಗಳ ಬಗ್ಗೆ ಗೊತ್ತಾಗುವುದು. ಅನಂತರ ಅವರಿಂದ ಬರುವ ಸಲಹೆಗಳಿಂದ ಆ ಸಮಸ್ಯೆಗಳ ಪರಿಹಾರದ **ಲಾಯೇಅಮಲ್** (ಮಾರ್ಗಸೂಚಿ)

ಸಹ ಮುಂದೆ ಬರುತ್ತದೆ. ಕೆಲವೊಮ್ಮೆ ಯಾವುದಾದರೂ ಸಮಸ್ಯೆಗಳ ಪರಿಹಾರದ ಬಗ್ಗೆ ಕೆಲವು ಸಂಗತಿಗಳು ವಿಶದವಾಗಿ ವಿವರಿಸಲಾಗಿರುವುದಿಲ್ಲ ಅಥವಾ ಶೂರಾದ ಸದಸ್ಯರ ಮುಂದೆ ಬರುವುದಿಲ್ಲ. ಹೀಗೆ ಖಲೀಫರು ಆ ಸಂಗತಿಗಳನ್ನು ಮಾರ್ಗಸೂಚಿಯಲ್ಲಿ ಸೇರಿಸುತ್ತಾರೆ. ಕೆಲವೆಡೆ ನಾನು ಕೂಡ ಇದೇ ವಿಧಾನವನ್ನು ಕೈಗೊಳ್ಳುತ್ತೇನೆ. ಆದ್ದರಿಂದ ಹೇಗಿದ್ದರೂ ಶೂರಾಗೆ ವಿಶೇಷವಾದ ಪ್ರಾಮುಖ್ಯವಿದೆ ಎಂಬ ಸಂಗತಿಯ ಬಗ್ಗೆ ಶೂರಾದ ಪ್ರತಿಯೊಬ್ಬ ಸದಸ್ಯನಿಗೆ ಸಂಪೂರ್ಣವಾದ ಅರಿವು ಇರಬೇಕು. ಈ ಪ್ರಾಮುಖ್ಯತೆ ಮೂರು ದಿನಗಳಿಗೆ ಮಾತ್ರವಲ್ಲ, ಪೂರ್ತಿ ವರ್ಷಕ್ಕಾಗಿ ಆಗಿರುತ್ತದೆ. ತಯಾರಾಗುವ **ಲಾಯೇ ಅಮಲ್** ಪ್ರಕಾರ ಕೆಲಸಗಳನ್ನು ನಡೆಸಲು ಮತ್ತು ಜಮಾಅತಿನ ವ್ಯವಸ್ಥೆಗೆ ಸಂಪೂರ್ಣ ಸಹಕಾರ ನೀಡಲು ಶೂರಾದ ಪ್ರತಿಯೊಬ್ಬ ಸದಸ್ಯ ಪ್ರಯತ್ನಿಸಬೇಕು. ಇದು ಅವರ ಹೊಣೆಗಾರಿಕೆಯಾಗಿದೆ. ಇದು ನಡೆಯುವಾಗಲೇ ಜಮಾಅತಿನ ಪ್ರಗತಿಯ ಯೋಜನೆಗಳು ಸರಿಯಾದ ಮಾರ್ಗದಲ್ಲಿ ಚಲಿಸುವುವು ಮತ್ತು ಅವುಗಳನ್ನು ಉತ್ತಮವಾಗಿ ನಡೆಸಲು ಸಾಧ್ಯವಾಗುವುದು ಹಾಗೂ ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಒಪ್ಪಿಸಲಾದ ಸನ್ಮಾರ್ಗದ ಮಹತ್ಕಾರ್ಯದಲ್ಲಿ ನಾವು ಸಹಕಾರಿ ಮತ್ತು ಸಹಾಯಕರಾಗಲು ಸಾಧ್ಯವಾಗುವುದು. ಇದು ಇಲ್ಲದಿದ್ದರೆ ಶೂರಾದ ಸದಸ್ಯರಾಗುವುದು ನಿರುಪಯುಕ್ತ.

ಶೂರಾ ಸಭೆಯು ಲೋಕದ ಎಲ್ಲ ದೇಶಗಳಲ್ಲಿ ಸಾಮಾನ್ಯವಾಗಿ ಅಮೀರರ ಅಧ್ಯಕ್ಷತೆಯಲ್ಲಿ ಜರುಗುತ್ತದೆ. ಕೆಲವೊಮ್ಮೆ ಸಲಹೆ ನೀಡುವವರು ಭಾಷಣದ ಆವೇಶದಲ್ಲಿ ಶೂರಾದ ಪರಿಶುದ್ಧಿಗೆ ಎದುರಾದ ಪದಗಳನ್ನು ಉಪಯೋಗಿಸುತ್ತಾರೆ. ಆದ್ದರಿಂದ ಮೊದಲ ಸಂಗತಿ ಏನೆಂದರೆ, ಸದಸ್ಯರು ಸಲಹೆ ನೀಡುವಾಗ ಭಾಷಣದ ಆವೇಶವನ್ನು ತೋರಿಸುವುದಕ್ಕೆ ಬದಲಾಗಿ, ಅಜಾಗರೂಕತೆಯಿಂದ ಮತ್ತು ಪ್ರಜ್ಞಾಹೀನರಾಗಿ ಭಾಷಣ ಮಾಡುವುದಕ್ಕೆ ಬದಲಾಗಿ, ಭಾವುಕರಾಗಿ ಭಾಷಣಗಳನ್ನು ಮಾಡುವುದಕ್ಕೆ ಬದಲಾಗಿ, ಸಮಂಜಸವಾದ ಪದಗಳೊಂದಿಗೆ ತಮ್ಮ ಸಲಹೆಗಳನ್ನು ನೀಡಬೇಕು.

ಕೆಲವೊಮ್ಮೆ ಸಲಹೆ ನೀಡುವವರು ಎಂತಹ ಮಾತುಗಳನ್ನು ಹೇಳುತ್ತಾರೆ ಎಂದರೆ, ಸಲಹೆ ನೀಡುವವರು ನೇರವಾಗಿ ಅಥವಾ ಪರೋಕ್ಷವಾಗಿ ನಮ್ಮ ವಿರುದ್ಧ

ಮಾತನಾಡುತ್ತಿದ್ದಾರೆ ಎಂದು ಆಮಿಲದ ಸದಸ್ಯರು ಅಥವಾ ಯಾರ ಅಧ್ಯಕ್ಷತೆಯಲ್ಲಿ ಶೂರಾ ನಡೆಯುತ್ತಿದೆಯೋ ಅವರು ಭಾವಿಸುತ್ತಾರೆ. ಹೀಗೆ ಸಭೆಯ ಅಧ್ಯಕ್ಷನೆಂಬ ನೆಲೆಯಲ್ಲಿ ಅವರು ಮಾತನಾಡುವ ವ್ಯಕ್ತಿಯನ್ನು ಕಠಿಣ ಮಾತುಗಳೊಂದಿಗೆ ತಡೆಯುತ್ತಾರೆ ಅಥವಾ ಗದರಿಸುತ್ತಾರೆ. ಇದು ಸಲ್ಲದು. ಬದಲಾಗಿ ಅಮೀರರು ಕೂಡ ಸಹನೆ ತೋರಿಸಬೇಕು. ಹೇಳುವವನು ಜಮಾಅತಿನ ಹಿತಕ್ಕಾಗಿ ಮತ್ತು ಜಮಾಅತಿನ ಬಗ್ಗೆ ನೋವು ಇರಿಸಿಕೊಂಡು ಹೇಳುತ್ತಿದ್ದಾನೆ ಎಂಬ ಉತ್ತಮ ಭಾವನೆಯನ್ನು ಹೊಂದಬೇಕು.

ಮಾತನಾಡುವವನು ಕಠಿಣವಾದ ಪದಗಳನ್ನು ಅಥವಾ ಶೂರಾದ ಪರಿಶುದ್ಧಿಗೆ ವಿರುದ್ಧವಾದ ಪದಗಳನ್ನು ಉಪಯೋಗಿಸಿದ್ದರೆ ಸೌಮ್ಯವಾಗಿ ಆತನಿಗೆ ತಿಳಿಹೇಳಿರಿ. ಸಭಾಧ್ಯಕ್ಷರಾಗಿ ಇರುವವರು ಇದನ್ನು ವೈಯಕ್ತಿಕ ಗೌರವದ ವಿಷಯವಾಗಿ ಕಾಣುತ್ತಿದ್ದಾರೆ ಎಂದು ತೋರುವ ರೀತಿಯಲ್ಲಿ ವರ್ತಿಸಬೇಡಿರಿ. ವಿಶೇಷವಾಗಿ ಬಜೆಟಿನ ವಿಷಯದಲ್ಲಿ ಚರ್ಚೆ ನಡೆಯುವಾಗ ಹೆಚ್ಚು ಭಾವುಕರಾಗುತ್ತಾರೆ ಮತ್ತು ಕೆಲವರು ಕಳವಳವನ್ನು ಸಹ ಪ್ರಕಟಿಸುತ್ತಾರೆ. ಇಂತಹ ಸ್ಥಿತಿಗಳಲ್ಲಿಯೂ ಸಂಬಂಧಪಟ್ಟ ಸೆಕ್ರೆಟರಿಗಳು ಮತ್ತು ಸಭಾಧ್ಯಕ್ಷರು ತಾಳ್ಮೆಯಿಂದ ಮಾತನ್ನು ಆಲಿಸಿ ಅದರ ಉತ್ತರವನ್ನು ಕೊಡಬೇಕು. ಹೇಗೆ ಬಜೆಟ್ ತಯಾರಿಸಲಾಗಿದೆ, ಆದಾಯ ಯಾವ ರೀತಿಯಲ್ಲಿ ಆಗುವುದು, ಖರ್ಚುಗಳು ಹೇಗೆ ಆಗುತ್ತಿವೆ, ಇದನ್ನು ಸರಿಹೊಂದಿಸುವುದು ಹೇಗೆ ಎಂಬುದನ್ನು ಹೇಳಿ ಸಮಾಧಾನ ಪಡಿಸಬೇಕು. ಹೇಳುವವನು ಜಮಾಅತಿನ ಹಿತವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾತನಾಡುತ್ತಾನೆ. ಆದ್ದರಿಂದ ತಪ್ಪು ಭಾವನೆಯನ್ನು ಇರಿಸಬಾರದು. ಅದೇ ರೀತಿಯಲ್ಲಿ ಅಜೆಂಡಗಳ (ಕಾರ್ಯಸೂಚಿ) ಇತರ ಸಲಹೆಗಳು ಇರುತ್ತವೆ. ಅದರಲ್ಲಿ ಕೆಲವೊಮ್ಮೆ ವ್ಯವಸ್ಥಾಪಕರು ಮತ್ತು ಪ್ರತಿನಿಧಿಗಳು ವಿನಾ ಕಾರಣ ಗೊಂದಲಗೊಳ್ಳುತ್ತಾರೆ. ಅಥವಾ ವ್ಯವಸ್ಥಾಪಕರಿಗೆ ಭಯಗೊಂಡ ರೀತಿಯಲ್ಲಿ ಪ್ರತಿನಿಧಿಗಳು ಪೂರ್ಣವಾಗಿಯೂ ಮೌನವಾಗಿ ಇರುತ್ತಾರೆ. ಅಂತಹ ಜನರು ಕೂಡ ತಮ್ಮ ಅಮಾನತ್ತಿನ ಹಕ್ಕನ್ನು ಈಡೇರಿಸುವುದಿಲ್ಲ. ಪ್ರತಿನಿಧಿಗಳು ತಮ್ಮ ಪ್ರಾತಿನಿಧ್ಯವನ್ನು ನೆರವೇರಿಸಲು ಮತ್ತು ಅಮಾನತ್ತಿನ ಹಕ್ಕನ್ನು ಈಡೇರಿಸಲಿಕ್ಕಾಗಿ ಜನರು ಅವರನ್ನು ಚುನಾಯಿತಗೊಳಿಸಿರುವರು ಎಂಬುದನ್ನು ಸದಾ ನೆನಪಿನಲ್ಲಿಡಬೇಕು.

ಆದ್ದರಿಂದ ಯಾವುದನ್ನೂ ವೈಯಕ್ತಿಕ ಪ್ರಶ್ನೆಯಾಗಿ ತೆಗೆಯಬಾರದು ಮತ್ತು ಯಾವುದೇ ರೀತಿಯ ಭಯವೂ ಇರಬಾರದು. تُؤَدُّوا الْاَمٰنٰتِ اِلٰٓى اَهْلِهَا – **ತುಅದ್ದುಲ್ ಅಮಾನತ ಇಲಾ ಅಹ್ಲಿಹಾ** – ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕು – **(ಪವಿತ್ರ ಖುರ್‌ಆನ್, 4:59)** ಎಂಬ ಅಲ್ಲಾಹನ ಆಜ್ಞೆ ಪ್ರಕಾರ ಜನರು ನಮ್ಮನ್ನು ಚುನಾಯಿತಗೊಳಿಸಿರುವರು ಎಂಬುದನ್ನು ಸದಾ ಮನವರಿಕೆ ಮಾಡಬೇಕಾಗಿದೆ. ಜನರು ಅಲ್ಲಾಹನ ಆದೇಶದ ಪ್ರಕಾರ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿರುವಾಗ, ಪ್ರತಿನಿಧಿಗಳು ಅದರ ಪ್ರಕಾರವೇ ತಮ್ಮ ಪ್ರಾತಿನಿಧ್ಯದ ಕರ್ತವ್ಯವನ್ನು ಈಡೇರಿಸುತ್ತಿರಬಹುದು ಎಂದು ಖಲೀಫತುಲ್ ಮಸೀಹ್ ಸಹ ಭಾವಿಸುತ್ತಾರೆ. ಪ್ರತಿನಿಧಿಗಳು ತಮ್ಮ ಈ ಕರ್ತವ್ಯಗಳನ್ನು ಶೂರಾದಲ್ಲಿ ಮತ್ತು ಶೂರಾದ ನಂತರವೂ ನಿರ್ವಹಿಸುತ್ತಿಲ್ಲವೆಂದಾದರೆ ಅವರು ಜಮಾಅತಿನ ಸದಸ್ಯರ ಭರವಸೆಗೆ ಧಕ್ಕೆ ಉಂಟುಮಾಡುತ್ತಾರೆ. ಮಾತ್ರವಲ್ಲ, ಖಲೀಫತುಲ್ ಮಸೀಹ್‌ರೊಂದಿಗೂ ತಮ್ಮ ಅಮಾನತ್ತಿನ ಹಕ್ಕನ್ನು ಈಡೇರಿಸದೇ ಮೋಸಮಾಡುವವರಾಗುತ್ತಾರೆ. ಆದರೆ ಇಲ್ಲಿ ಮತ್ತೊಂದು ಸ್ಥಿತಿಯೂ ಆಗಿರಬಹುದು. ಅದೇನೆಂದರೆ, ಪ್ರತಿನಿಧಿಗಳನ್ನು ಆಯ್ಕೆ ಮಾಡುವವರು ಕೂಡ ದೇವಭಯವನ್ನು ಮುಂದಿರಿಸದೇ ಪ್ರತಿನಿಧಿಗಳನ್ನು ಆಯ್ಕೆ ಮಾಡಿರಬಹುದು. ಬಂಧುಗಳ ಸಂಬಂಧಕ್ಕೆ ಅಥವಾ ಸ್ನೇಹಿತರ ಗೆಳೆತನಕ್ಕೆ ಬೆಲೆಕೊಡುತ್ತಾ ಆಯ್ಕೆ ಮಾಡಿರಬಹುದು.

ಹೇಗಿದ್ದರೂ ಆಯ್ಕೆ ಮಾಡುವವವರು ಹೀಗೆ ತಪ್ಪು ಮಾಡಿಕೊಂಡು ತಪ್ಪುಗಾರರಾಗುತ್ತಾರೆ. ಅವರು ತಮ್ಮ ಹಕ್ಕನ್ನು ಈಡೇರಿಸದಿದ್ದರೆ **ಇಸ್ತಿಗ್‌ಫಾರ್** (ಅಲ್ಲಾಹನೊಡನೆ ಕ್ಷಮೆಯಾಚನೆ) ಮಾಡಬೇಕು. ಆದರೆ ನಾನು ಪ್ರತಿನಿಧಿಗಳೊಡನೆ ಮತ್ತು ಹುದ್ದೇದಾರರೊಡನೆ ಹೇಳುತ್ತೇನೆ. ಅವರನ್ನು ಈಗ ಚುನಾಯಿತಗೊಳಿಸಿರುವಾಗ, ಅವರಲ್ಲಿ ಇರಬೇಕಾದ ಆಧ್ಯಾತ್ಮಿಕ ಸ್ಥಿತಿ ಇಲ್ಲದಿದ್ದರೂ ಕೂಡ ಈಗ ಅವರು **ಇಸ್ತಿಗ್ಫಾರ್** ಮಾಡುತ್ತಾ, ತಮ್ಮ ಸ್ಥಿತಿಗಳಲ್ಲಿ ಸಕಾರಾತ್ಮಕ ಬದಲಾವಣೆ ಮಾಡುವುದಾಗಿ ಪ್ರತಿಜ್ಞೆ ಮಾಡುತ್ತಾ, ತಖ್ವದಲ್ಲಿ (ದೇವಭಯ) ನಡೆಯಲು ಶತ ಪ್ರಯತ್ನ ಮಾಡುತ್ತಾ ತಮ್ಮನ್ನು ಸ್ವತಃ ಅಮಾನತ್ತಿನ ಹಕ್ಕನ್ನು ಈಡೇರಿಸಲು ಯೋಗ್ಯರನ್ನಾಗಿ ಮಾಡಲು ಪ್ರಯತ್ನಿಸಬೇಕು. ಈ ಪ್ರಯತ್ನ

ಇದ್ದರೆ ನೀವು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವವರೂ ಹಝ್ರತ್ ಮಸೀಹ್ ಮೌಊದ್‌ರ(ಅ) ಮಹತ್ಕಾರ್ಯದಲ್ಲಿ ಸಹಾಯಕರೂ ಆಗುವಿರಿ. ಅದರೊಂದಿಗೆ ನಿಮ್ಮ ಕರ್ಮಪರ ಮತ್ತು ಆಧ್ಯಾತ್ಮಿಕ ಸ್ಥಿತಿಗಳನ್ನು ಉತ್ತಮಗೊಳಿಸುವವರಾಗುವಿರಿ.

ನಾನು ಹೇಳಿದಂತೆ ಪ್ರಾತಿನಿಧ್ಯ ಒಂದು ವರ್ಷಕ್ಕೆ ಆಗಿರುತ್ತದೆ. ಜಮಾಅತಿನ ವ್ಯವಸ್ಥೆಯೊಂದಿಗೆ ಸಹಕಾರ ಮಾಡುವುದು, ತೀರ್ಮಾನಗಳನ್ನು ಸ್ವತಃ ಪಾಲಿಸುವುದು ಮತ್ತು ಪಾಲಿಸುವಂತೆ ಮಾಡುವುದು ಪ್ರತಿನಿಧಿಗಳ ಕರ್ತವ್ಯವಾಗಿದೆ. ನಿಮ್ಮ ಜಮಾಅತಿನಲ್ಲಿ ಎಷ್ಟರ ಮಟ್ಟಿಗೆ ಖಲೀಫತುಲ್ ಮಸೀಹ್‌ರ ತೀರ್ಪುಗಳ ಪಾಲನೆ ನಡೆಯುತ್ತಿದೆ ಎಂಬುದರ ಮೇಲ್ನೋಟವಹಿಸುತ್ತಿರಬೇಕು.

ಒಟ್ಟಿನಲ್ಲಿ ಈ ರೀತಿಯಾಗಿ ನೀವು ಖಲೀಫತುಲ್ ಮಸೀಹರ ಸಹಾಯಕರಾಗಬೇಕು. ಜಮಾಅತಿನಲ್ಲಿ ಕೆಲವೊಮ್ಮೆ ತೀರ್ಮಾನಗಳು ಹುದ್ದೇದಾರರ ಸೋಮಾರಿತನಕ್ಕೆ ಗುರಿಯಾಗಿರುತ್ತವೆ. ಸರಿಯಾದ ರೀತಿಯಲ್ಲಿ ಅವುಗಳನ್ನು ಪಾಲಿಸಲಾಗುವುದಿಲ್ಲ. ಇಂತಹ ಅವಸ್ಥೆಯಲ್ಲಿ ಜಮಾಅತಿನ ಸದಸ್ಯರನ್ನೂ ಹುದ್ದೇದಾರರನ್ನೂ ಅವರ ಹೊಣೆಗಾರಿಕೆಗಳ ಬಗ್ಗೆ ಗಮನ ಸೆಳೆಯುವುದು ಶೂರಾದ ಪ್ರತಿನಿಧಿಗಳ ಜವಾಬ್ದಾರಿಯಾಗಿದೆ. ಇಷ್ಟಾದರೂ ಶ್ರದ್ಧೆವಹಿಸುವುದಿಲ್ಲವೆಂದಾದರೆ, ನಡೆಯಬೇಕಾದ ರೀತಿಯಲ್ಲಿ ಯೋಜನೆಗಳು ನಡೆಯುವುದಿಲ್ಲವೆಂದಾದರೆ ಮರ್ಕಝಿಗೆ (ಕೇಂದ್ರಕ್ಕೆ) ತಿಳಿಸಿಕೊಡಬೇಕು. ಅದೇ ರೀತಿಯಲ್ಲಿ ಅನೇಕ ಹುದ್ದೇದಾರರು ಶೂರಾದ ಸದಸ್ಯರಾಗಿರುತ್ತಾರೆ. ತನ್ನ ವಿಭಾಗದ ಕೆಲಸಗಳನ್ನು ಮಾತ್ರ ನೋಡುವುದು ಅವರ ಕೆಲಸವಲ್ಲ. ಬದಲಿಗೆ, ತನ್ನ ವಿಭಾಗಕ್ಕೆ ಸಂಬಂಧಪಟ್ಟ ಅಥವಾ ಸಂಬಂಧಪಡದ ಶೂರಾದ ಸಲಹೆಗಳನ್ನು ಮತ್ತು ಖಲೀಫತುಲ್ ಮಸೀಹರ ತೀರ್ಪುಗಳನ್ನು ಪಾಲಿಸಲಾಗುತ್ತಿಲ್ಲ ಮತ್ತು ಅದರಂತೆ ಕೆಲಸ ನಡೆಯುತ್ತಿಲ್ಲ ಎಂದಾದರೆ, ಅದನ್ನು ಅವರು ಗಂಭೀರವಾಗಿ ಪರಿಗಣಿಸಬೇಕು. ಆ ವಿಭಾಗಕ್ಕೆ ಸಂಬಂಧಪಟ್ಟ ಹುದ್ದೇದಾರ ಮತ್ತು ಅಮೀರರ ಗಮನಕ್ಕೆ ಅದನ್ನು ತರಬೇಕು. ಆಮಿಲದಲ್ಲೂ ಈ ವಿಷಯವನ್ನು ಇರಿಸಬೇಕು. ಹೀಗೆ ಮಾಡುವುದಿಲ್ಲವೆಂದಾದರೆ ಅಂತಹ ಪ್ರತಿನಿಧಿಗಳು ಕೂಡ ತಮ್ಮ ಅಮಾನತ್ತಿನ ಹಕ್ಕನ್ನು ನೆರವೇರಿಸದವರಾಗುವರು. ಲೋಕದಲ್ಲಿ ನೆವನಗಳನ್ನು ಹೇಳಿಕೊಂಡು ಬಚಾವಾಗಬಹುದು. ಆದರೆ ಅಲ್ಲಾಹನಿಂದ ಯಾವುದೇ ಸಂಗತಿ

ಗೋಪ್ಯವಾಗಿರುವುದಿಲ್ಲ. ಅವನು ಅಮಾನತ್ತುಗಳನ್ನು ಈಡೇರಿಸುವುದರ ಬಗ್ಗೆ ಪ್ರಶ್ನಿಸುವನು. ಆದ್ದರಿಂದ ಇದು ಬಹಳ ಚಿಂತನೀಯವಾದ ವಿಷಯವಾಗಿದೆ. ನಾವು ಶೂರಾದ ಸದಸ್ಯರಾಗಿದ್ದೇವೆ ಅಥವಾ ಹುದ್ದೇದಾರರಾಗಿದ್ದೇವೆ ಎಂಬುದರ ಬಗ್ಗೆ ಹೆಮ್ಮೆಪಡಬಾರದು. ಬದಲಿಗೆ ತಮ್ಮ ಹೊಣೆಗಾರಿಕೆಗಳ ಬಗ್ಗೆ ಪ್ರತಿಯೊಬ್ಬರಿಗೆ ಚಿಂತೆ ಇರಬೇಕು.

ನಾನು ಹೇಳಿದಂತೆ ಶೂರಾದ ಸದಸ್ಯರು ಜಮಾಅತಿನ ಹುದ್ದೇದಾರರ ಗಮನ ಸೆಳೆಯಲು ಪ್ರಯತ್ನಿಸಿದ ನಂತರವೂ ಶೂರಾದ ತೀರ್ಮಾನಗಳನ್ನು ಪಾಲಿಸುವುದಿಲ್ಲ ಎಂದಾದರೆ ಕೇಂದ್ರಕ್ಕೆ ತಿಳಿಸಬೇಕು. ಹೀಗೆ ಕೆಲವರು ಈಗಾಗಲೇ ಮಾಡುತ್ತಿದ್ದಾರೆ. ಹುದ್ದೇದಾರರು ಕೆಲಸ ಮಾಡದೇ ಇರುವಾಗ, ಕೆಲವರು ಕೇಂದ್ರಕ್ಕೆ ತಿಳಿಸುತ್ತಾರೆ. ಆದರೆ ಸಾಮಾನ್ಯವಾಗಿ ಯಾವನಾದರೂ ಹುದ್ದೇದಾರನೊಡನೆ ವೈಯಕ್ತಿಕ ಅಸಮಾಧಾನ ಮತ್ತು ಕೋಪದ ಕಾರಣದಿಂದ ಭಿನ್ನತೆಯಿದ್ದರೆ ಮಾತ್ರ ಅವರು ಕೇಂದ್ರಕ್ಕೆ ತಿಳಿಸುತ್ತಾರೆ. ಇದು ತಖ್ವದ ರೀತಿಯಲ್ಲ. ಮಂಜೂರಾದ ಸಲಹೆಗಳನ್ನು ಪಾಲಿಸಲು ಮತ್ತು ಪಾಲಿಸುವಂತೆ ಮಾಡಲು ಪ್ರತಿಯೊಬ್ಬ ಪ್ರತಿನಿಧಿ ಮತ್ತು ಹುದ್ದೇದಾರ ದೇವಭಯವನ್ನು ಮುಂದಿರಿಸುತ್ತಾ ಪ್ರಯತ್ನಿಸಿದರೆ ಮರುವರ್ಷ ಅಥವಾ ಎರಡು ಮೂರು ವರ್ಷಗಳ ನಂತರ ಪುನಃ ಹಳೆಯ ಸಲಹೆಗಳು ಮುಂದಿರಿಸಲಾಗುವ ಸ್ಥಿತಿ ಉಂಟಾಗಲಾರದು. ಜಮಾಅತುಗಳ ಕಡೆಯಿಂದ ಕೆಲವು ಸಲಹೆಗಳು ಪುನಃ ಬರುವುದರ ಅರ್ಥವೇನೆಂದರೆ, ನಡೆಯಬೇಕಾದ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲವೆಂದಾಗಿದೆ.

ಆದ್ದರಿಂದ ಇದು ತಖ್ವದಲ್ಲಿ ನಡೆಯುವ, ತಮ್ಮ ಅಮಾನತ್ತುಗಳ ಹಕ್ಕುಗಳನ್ನು ಈಡೇರಿಸುವ, ಖಿಲಾಫತಿನ ಅನುಸರಣೆ ಮಾಡುವ ಮತ್ತು ತಮ್ಮ ಪ್ರತಿಜ್ಞೆಯನ್ನು ನಿಭಾಯಿಸುವ ಕೃತ್ಯವೇ ಎಂದು ಅಂತಹ ಜಮಾಅತುಗಳು ಮತ್ತು ಹುದ್ದೇದಾರರು ಯೋಚಿಸಬೇಕು. ದೇಶದಲ್ಲಿರುವ ಜಮಾಅತುಗಳು ಕೇಂದ್ರಕ್ಕೆ ಪುನಃ ಸಲಹೆಗಳನ್ನು ಕಳುಹಿಸಲು ಕಾರಣವೇ ಮಂಜೂರಾದ ಸಲಹೆಗಳನ್ನು ಪಾಲಿಸುತ್ತಿಲ್ಲ ಎಂಬುದಾಗಿದೆ. ಪಾಲಿಸಲಾಗುತ್ತಿದೆ ಎಂದಾದರೆ, ಎಷ್ಟರ ಮಟ್ಟಿಗೆ ಪಾಲಿಸಲಾಗುತ್ತಿದೆ ಎಂಬುದರ ಮೇಲ್ನೋಟವಹಿಸಲಾಗುತ್ತಿದೆ ಎಂದಾದರೆ ಹಳೆಯ

ಸಲಹೆಗಳು ಪುನಃ ಬರಲು ಸಾಧ್ಯವಿಲ್ಲ ಹಾಗೂ ಈ ಸಲಹೆಗಳು ಒಂದು ವರ್ಷ ಮುಂಚೆ ಅಥವಾ ಎರಡು ವರ್ಷಗಳಿಗೆ ಮುಂಚೆ ಬಂದಾಗಿವೆ, ಆದ್ದರಿಂದ ಇವುಗಳನ್ನು ಶೂರಾದಲ್ಲಿ ಮುಂದಿರಿಸಲು ಶಿಫಾರಸ್ಸು ಮಾಡಲಾಗುವುದಿಲ್ಲವೆಂದು ಖಲೀಫತುಲ್ ಮಸೀಹರ ಸನ್ನಿಧಿಯಲ್ಲಿ ಕಳುಹಿಸಬೇಕಾದ ಆವಶ್ಯಕತೆಯೂ ಉಂಟಾಗಲು ಸಾಧ್ಯವಲ್ಲ. ಅವುಗಳನ್ನು ಕಾರ್ಯಗತಗೊಳಿಸಲು ನಮ್ಮಿಂದ ಸಾಧ್ಯವಾಗಲಿಲ್ಲ, ಆದರೆ ಈ ವರ್ಷ ನಾವು ಅದರ ಪ್ರಕಾರ ನಡೆಯುವೆವು ಹಾಗೂ ಅವುಗಳನ್ನು ಕಾರ್ಯಗತಗೊಳಿಸದಿದ್ದರೆ ನಾವು ಅಪರಾಧಿಗಳು ಮತ್ತು ಅಮಾನತ್ತುಗಳ ಹಕ್ಕುಗಳನ್ನು ಈಡೇರಿಸದ ಜನರಲ್ಲಿ ಸೇರುವವರಾಗುವೆವು ಎಂದು ಕೇಂದ್ರದ ಹುದ್ದೇದಾರರು ಕೂಡ ಲಜ್ಜಿತರಾಗಿ ಪತ್ರವನ್ನು ಬರೆಯಬೇಕು. ನಾವು ಈ ವರ್ಷ ಈ ಸಲಹೆಯನ್ನು ಮತ್ತೊಮ್ಮೆ ಮಂಡಿಸದಿರಲು ಶಿಫಾರಸ್ಸು ಮಾಡುತ್ತೇವೆ ಎಂದು ಕ್ಷಮೆ ಯಾಚನೆ ಮಾಡುತ್ತಾ ಪತ್ರ ಬರೆಯಬೇಕು. ಹೀಗೆ ಮಾಡಿದರೆ ಹೊಣೆಗಾರಿಕೆಯ ಅರಿವು ಉಂಟಾಗುವುದು. ಇದರಿಂದ ದೊಡ್ಡ ದೊಡ್ಡ ಮಾರ್ಗಸೂಚಿಗಳನ್ನು ಮಾಡಿಕೊಂಡು ಖಲೀಫರಿಗೆ ಸಮರ್ಪಿಸಿದ ನಂತರ ಅದರ ಪ್ರಕಾರ ನಡೆಯದಿದ್ದರೆ ನಾವು ಅಪರಾಧಿಗಳಾಗುವೆವು ಮತ್ತು ಖಲೀಫತುಲ್ ಮಸೀಹರು ಅವರ ಮೇಲೆ ಇರಿಸಿರುವ ಭರವಸೆಗೆ ಧಕ್ಕೆ ಉಂಟುಮಾಡುತ್ತಿದ್ದೇವೆ ಎಂಬ ತಮ್ಮ ತಪ್ಪಿನ ಅರಿವು ಕನಿಷ್ಠ ಪಕ್ಷ ಅವರಿಗೆ ಉಂಟಾಗುವುದು. ಈ ರೀತಿಯಾಗಿ ಒಟ್ಟಾಗಿ ಒಂದು ಅವಲೋಕನ ನಡೆಸುವುದರ ಜೊತೆಗೆ ವೈಯಕ್ತಿಕವಾಗಿಯೂ ಶೂರಾದ ಪ್ರತಿನಿಧಿಗಳು ಮತ್ತು ಹುದ್ದೇದಾರರು ತಮ್ಮ ಆತ್ಮಾವಲೋಕನ ನಡೆಸಬೇಕು, **ಇಸ್ತಿಗ್‌ಫಾರ್** ಮಾಡಬೇಕು ಹಾಗೂ ಕಾರ್ಯಗತಗೊಳ್ಳದೇ ಆಗಲು ಕಾರಣವೇನೆಂದು ಕಂಡುಹಿಡಿಯಬೇಕು. ಈ ಅವಲೋಕನವೇ ಜಮಾಅತಿನ ವ್ಯವಸ್ಥೆಯನ್ನು ಸರಿಯಾದ ಮಾರ್ಗದಲ್ಲಿ ನಡೆಸುವುದು. ಅದಲ್ಲದೆ ಕೇವಲ ಬಾಯಿಮಾತುಗಳಿಂದ ಯಾವುದೇ ಪ್ರಯೋಜನ ಲಭಿಸದು.

ಕೆಲವು ಸಕ್ರಿಯ ಜಮಾಅತುಗಳು ಶೇಕಡ ನೂರರಷ್ಟು ಅಲ್ಲವಾದರೂ ಶೇಕಡ ಎಪ್ಪತ್ತು ಎಂಬತ್ತರಷ್ಟು ಸಲಹೆಗಳನ್ನು ಶ್ರದ್ಧೆಯಿಂದ ಪಾಲಿಸುತ್ತಾರೆ. ಖಲೀಫತುಲ್ ಮಸೀಹರ ಮಂಜೂರಾತಿಯಿಂದ ಈ ಮಾರ್ಗಸೂಚಿ ನಮಗೆ ಲಭಿಸಿದೆ ಮತ್ತು ನಾವು ಖಲೀಫತುಲ್ ಮಸೀಹರ ಭರವಸೆಗೆ ಧಕ್ಕೆ ಉಂಟುಮಾಡಬಾರದು

ಎಂದು ಅವರು ಯೋಚಿಸುತ್ತಾರೆ. ಆ ಜಮಾಅತುಗಳ ಸದಸ್ಯರಲ್ಲಿ ಇಂತಹ ಪರಿವರ್ತನೆ ಉಂಟುಮಾಡಲು ಕಾರಣವಾದ ಆವೇಶ ಯಾವುದು ಎಂದು ತಿಳಿಯಬೇಕು. ಇಂತಹ ಕ್ರಿಯಾಶೀಲ ಜಮಾಅತುಗಳ ಹುದ್ದೇದಾರರು ದುರ್ಬಲ ಜಮಾಅತುಗಳ ಹುದ್ದೇದಾರರೊಂದಿಗೆ ಮೀಟಿಂಗ್ ನಡೆಸಬೇಕು. ಮಾತ್ರವಲ್ಲ ಕೇಂದ್ರದ ಹುದ್ದೇದಾರರೊಂದಿಗೂ ಮೀಟಿಂಗ್ ನಡೆಸಿ ಅವರ ಅನುಭವದಿಂದ ಪ್ರಯೋಜನ ಪಡೆಯಬೇಕು.

ಯಾವುದಾದರೂ ಜಾಗದಲ್ಲಿ ಒಂದು ಜಮಾಅತಾದರೂ ಕ್ರಿಯಾಶೀಲ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಪೂರ್ಣವಾಗಿ ಪಾಲಿಸುವಂಥದ್ದಾಗಿದ್ದರೆ, ಆ ಜಮಾಅತ್ ಇತರ ಹತ್ತು ಜಮಾಅತುಗಳಿಗೆ ತಮ್ಮ ಕಾರ್ಯವಿಧಾನವನ್ನು ಹಂಚಿದರೆ ಪ್ರಯೋಜನ ಉಂಟಾಗುವುದು. ಆದರೆ ಸಂಗತಿ ಏನೆಂದರೆ, ಕೇಂದ್ರದ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಸೆಕ್ರಟರಿ, ಹುದ್ದೇದಾರ ಮತ್ತು ಶೂರಾದ ಪ್ರತಿನಿಧಿಗಳು ತಮ್ಮ ಪಾತ್ರವನ್ನು ಪ್ರಾಮಾಣಿಕವಾಗಿ ನೆರವೇರಿಸುವವರಾದರೆ ಮಾತ್ರ ಇದಾಗುವುದು.

ಕಳೆದ ಮೂರು ವರ್ಷಗಳಲ್ಲಿ ನಡೆದ ಶೂರಾದ ತೀರ್ಪುಗಳನ್ನು ಎಷ್ಟರ ಮಟ್ಟಿಗೆ ಪಾಲಿಸಿವೆ ಮತ್ತು ಪಾಲಿಸಲಾಗುತ್ತಿವೆ ಎಂಬುದನ್ನು ಕೆಲವು ಜಮಾಅತುಗಳು ಅಥವಾ ದೇಶಗಳು ಅವಲೋಕನ ನಡೆಸಿದ್ದಾರೆ ಮತ್ತು ಅದರ ಪ್ರಯೋಜನ ಕೂಡ ಉಂಟಾಗಿದೆ. ಅನಂತರ ಅವರು ಅವಲೋಕನದ ತ್ರೈಮಾಸಿಕ ರಿಪೋರ್ಟ್ ಕೇಂದ್ರಕ್ಕೆ ಕಳುಹಿಸುತ್ತಾರೆ. ಈ ಸಲಹೆ ಎರಡು ವರ್ಷಗಳಿಗೆ ಮುಂಚೆ ನೀಡಲಾಗಿತ್ತು, ಆದ್ದರಿಂದ ಇದನ್ನು ಮಂಡಿಸಲಾಗದು ಎಂದು ಮಾತ್ರ ಹೇಳಿ ಕುಳಿತುಕೊಳ್ಳಬಾರದು ಎಂಬ ಅರಿವು ಅವರಿಗೆ ಇದೆ. ಮಾತ್ರವಲ್ಲ, ನಾವು ಈ ಮಾರ್ಗಸೂಚಿಯ ಪ್ರಕಾರ ನಡೆದುಕೊಂಡು ತಮ್ಮ ಉದ್ದೇಶವನ್ನು ಇಷ್ಟರ ಮಟ್ಟಿಗೆ ಗಳಿಸಿದ್ದೇವೆ ಮತ್ತು ಇನ್ನಷ್ಟು ಪ್ರಯತ್ನ ಮುಂದುವರೆದಿದೆ ಎಂಬ ರಿಪೋರ್ಟನ್ನು ಕೇಂದ್ರಕ್ಕೆ ನೀಡಬೇಕು ಎಂಬ ಅರಿವು ಕೂಡ ಅವರಿಗೆ ಉಂಟಾಗಿದೆ. ಆದ್ದರಿಂದ ಅಂತಹ ಜಮಾಅತುಗಳಲ್ಲಿ ಜವಾಬ್ದಾರಿಯ ಚಿಂತೆ ವರ್ಧಿಸಿದೆ. ಕೇವಲ ಮಾತುಗಳಿಂದ ನಾವು ಲೋಕವನ್ನು ವಿಜಯಿಸಲು ಸಾಧ್ಯವಲ್ಲ. ಅದಕ್ಕಾಗಿ ಕೆಲಸ ಮಾಡುವ ಅಗತ್ಯವಿದೆ.

ಸುದೃಢವಾದ ಯೋಜನೆಯ ಅಗತ್ಯ ಬೇಕಿರುವ ಜಾಗದಲ್ಲಿ ಕೃತ್ಯರೂಪದ

ಪ್ರಯತ್ನದ ಆವಶ್ಯಕತೆಯಿದೆ. ತಮ್ಮ ಆರಾಧನೆಗಳ ಉನ್ನತ ಮಟ್ಟವನ್ನು ಗಳಿಸಬೇಕಾದ ಆವಶ್ಯಕತೆಯಿದೆ. ಹುದ್ದೇದಾರರು ಮತ್ತು ಶೂರಾದ ಪ್ರತಿನಿಧಿಗಳು ತಮ್ಮ ಆರಾಧನೆಗಳ ಮಟ್ಟವನ್ನು ಉತ್ತಮಗೊಳಿಸುವುದರ ಕುರಿತು ಗಮನಹರಿಸಿದರೆ ಮತ್ತು ಮಸೀದಿಗಳನ್ನು ತುಂಬಿಸಲಿಕ್ಕಾಗಿ ತಮ್ಮ ಕೃತ್ಯರೂಪದ ಮಾದರಿಗಳನ್ನು ತೋರಿಸಿದರೆ ಮಸೀದಿಯು ಮೂರು ನಾಲ್ಕು ಪಟ್ಟು ಅಧಿಕ ತುಂಬುವುದು. ಆದ್ದರಿಂದ ಇದರ ಬಗ್ಗೆಯೂ ನಾವು ಅವಲೋಕನ ನಡೆಸಬೇಕಾದ ಅಗತ್ಯವಿದೆ.

ಆದ್ದರಿಂದ ತಮ್ಮ ಕೃತ್ಯರೂಪದ ಮಾದರಿಗಳು, ಜನರ ಜೊತೆಗೆ ಪ್ರೀತಿ ಮತ್ತು ಸ್ನೇಹದ ಸಂಬಂಧ, ಅವರ ನೋವು ಹೃದಯದಲ್ಲಿ ಇರಿಸುವುದು, ಅವರಿಗಾಗಿ ಮತ್ತು ತಮಗಾಗಿ ದುಆ ಮಾಡುವುದು, ಖಲೀಫತುಲ್ ಮಸೀಹ್‌ರೊಂದಿಗೆ ಅನುಸರಣೆಯ ಮಟ್ಟವನ್ನು ಉನ್ನತಗೊಳಿಸುವುದು ಎಂಬೀ ಸಂಗತಿಗಳು ಪ್ರತಿ ಹುದ್ದೇದಾರನ ಮತ್ತು ಶೂರಾ ಸದಸ್ಯನ ವಿಶಿಷ್ಟ ಗುಣವಾದರೆ ಮಾತ್ರ ಕ್ರಾಂತಿಕಾರಿಯಾದ ಪರಿವರ್ತನೆ ಒಟ್ಟಾಗಿ ಜಮಾಅತಿನಲ್ಲಿ ಉಂಟಾಗುವುದಾಗಿ ನೀವು ಕಾಣುವಿರಿ.

ಒಂದು ಬಹಳ ದೊಡ್ಡ ಕೆಲಸ ನಮಗೆ ಒಪ್ಪಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್‌ರ(ಅ) ಆಗಮನದ ಉದ್ದೇಶ ಮತ್ತು ಅವರ ಕಾರ್ಯಗಳು ಸಾಮಾನ್ಯವಲ್ಲ. ಲೋಕದಲ್ಲಿ ಇಸ್ಲಾಮಿನ ಸುಂದರವಾದ ಸಂದೇಶವನ್ನು ತಲುಪಿಸಿ ಲೋಕಜನರನ್ನು ಏಕದೇವನ ಆರಾಧಕರನ್ನಾಗಿ ಮಾಡುವುದು ನಿರಂತರವಾದ ಪ್ರಯತ್ನವನ್ನು ಆವಶ್ಯಪಡಿಸುತ್ತದೆ.

ನಾವು ನಮ್ಮ ಕೃತ್ಯರೂಪದ ಅವಸ್ಥೆಗಳನ್ನು ಸರಿಪಡಿಸಲು ಯೋಜನೆ ಮಾಡುವುದರ ಜೊತೆಗೆ ಏಕದೇವನ ಸಂದೇಶವನ್ನು ತಲುಪಿಸಲು, ಲೋಕವನ್ನು ಏಕ ಸಮುದಾಯವನ್ನಾಗಿ ಮಾಡಲಿಕ್ಕಾಗಿ ಹಾಗೂ ಲೋಕವನ್ನು ಹಝ್ರತ್ ಪೈಗಂಬರ್‌ರ(ಸ) ಧ್ವಜದ ಅಡಿಗೆ ತರಲು ಯೋಜನೆ ಮಾಡಿಕೊಂಡು ಒಂದು ಕ್ರಾಂತಿಯನ್ನು ಉಂಟುಮಾಡಲಿಕ್ಕಾಗಿ ಲೋಕದ ಎಲ್ಲ ದೇಶಗಳಲ್ಲಿ ಶೂರಾವನ್ನು ನಡೆಸಲಾಗುತ್ತದೆ.

ಈ ಎಲ್ಲ ಕೆಲಸಗಳನ್ನು ಈಡೇರಿಸಲಿಕ್ಕಾಗಿ ಖರ್ಚುಗಳ ಅಗತ್ಯವಿದೆ, ಹಣದ

ಆವಶ್ಯಕತೆಯಿದೆ ಎಂಬುದನ್ನು ಸದಾ ನೆನಪಿನಲ್ಲಿಡಬೇಕು. ಆದ್ದರಿಂದ ಕನಿಷ್ಠ ಖರ್ಚುಗಳಿಂದ ಗರಿಷ್ಠ ಪ್ರಯೋಜನ ಪಡೆಯುವ ರೀತಿಯಲ್ಲಿ ತಮ್ಮ ಆರ್ಥಿಕ ಬಜೆಟನ್ನು ತಯಾರಿಸಬೇಕು. ಜಮಾಅತಿನ ಹೆಚ್ಚಿನವರು ಬಡ ಮತ್ತು ಮಧ್ಯಮ ವರ್ಗದ ಜನರಾಗಿದ್ದಾರೆ. ಆದ್ದರಿಂದ ಕನಿಷ್ಠ ಖರ್ಚಿನಿಂದ ಹೆಚ್ಚು ಹೆಚ್ಚಾಗಿ ಇಸ್ಲಾಮಿನ ಪ್ರಚಾರದ ಕೆಲಸವನ್ನು ಮಾಡಬಹುದಾದ ರೀತಿಯಲ್ಲಿ ಅತ್ಯುತ್ತಮವಾಗಿ ನಮ್ಮ ಚಂದಾದ ಆದಾಯಕ್ಕೆ ಸಂಬಂಧಪಟ್ಟು ಯೋಜನೆ ಮಾಡಬೇಕು.

ನಾವು ತಖ್ವದ ಮಾರ್ಗದಲ್ಲಿ ನಡೆಯುತ್ತಾ ನಮ್ಮ ಹೊಣೆಗಾರಿಕೆಗಳನ್ನು ಮತ್ತು ಅಮಾನತ್ತುಗಳನ್ನು ಈಡೇರಿಸುವವರಾಗಬೇಕು ಮತ್ತು ದೀನಿನ ಸೇವೆಯನ್ನು ಒಂದು ದೈವಿಕ ಅನುಗ್ರಹವೆಂದು ಭಾವಿಸುಬೇಕು ಎಂಬ ಸತ್ಯತೆಯನ್ನು ನಾವು ಮನವರಿಕೆ ಮಾಡುವಾಗ ಮಾತ್ರ ನಾವು ಈ ಕೆಲಸವನ್ನು ಮಾಡಬಹುದಾಗಿದೆ. ದೇವಭಕ್ತಿಯಿಂದ ನಡೆಯಬೇಕು ಎಂದು ಉಪದೇಶಿಸುತ್ತಾ ಒಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

يٰۤاَيُّهَا الَّذِيۡنَ اٰمَنُوۡۤا اِنۡ تَتَّقُوا اللّٰهَ يَجۡعَلْ لَّكُمۡ فُرۡقَانًا وَّيُكَفِّرۡ عَنۡكُمۡ سَيِّاٰتِكُمۡ وَيَغۡفِرۡ لَكُمۡ‌ؕ وَاللّٰهُ ذُو الۡفَضۡلِ الۡعَظِيۡمِ ○

**ಯಾ ಅಯ್ಯುಹಲ್ಲಧೀನ ಆಮನೂ ಇನ್‌ತತ್ತಖುಲ್ಲಾಹ ಯಜ್‌ಅಲ್ಲಕುಮ್ ಫುರ್‌ಖಾನನ್ ವಯುಕಫ್ಫಿರ್ ಅನ್‌ಕುಂ ಸಯ್ಯಿಆತಿಕುಮ್ ವಯಗ್‌ಫಿರ್‌ಲಕುಮ್. ವಲ್ಲಾಹು ಧುಲ್‌ಫಝ್ಲಿಲ್ ಅಝೀಮ್.** (ಪವಿತ್ರ ಖುರ್‌ಆನ್, 8:30)

وَيَجۡعَلْ لَّكُمۡ نُوۡرًا تَمۡشُوۡنَ بِهٖ

**ವಯಜ್‌ಅಲ್ಲಕುಮ್ ನೂರನ್ ತಮ್‌ಶೂನ ಬಿಹೀ.** (ಪವಿತ್ರ ಖುರ್‌ಆನ್, 57:29)

ಅರ್ಥ: ಹೇ ಸತ್ಯವಿಶ್ವಾಸಿಗಳೇ, ನೀವು ಭಯಭಕ್ತಿ ಇರಿಸಿಕೊಳ್ಳುವುದರಲ್ಲಿ ಸ್ಥಿರತೆ ತೋರಿಸಿದರೆ ಮತ್ತು ಅಲ್ಲಾಹನಿಗಾಗಿ ತಖ್ವದ ಗುಣದಲ್ಲಿ ಸುದೃಢವಾಗಿ ನೆಲೆನಿಂತರೆ ಅಲ್ಲಾಹನು ನಿಮ್ಮಲ್ಲಿ ಮತ್ತು ಅನ್ಯರಲ್ಲಿ ಒಂದು ವ್ಯತ್ಯಾಸವನ್ನು ಇರಿಸುವನು. ಆ ವ್ಯತ್ಯಾಸ ಏನೆಂದರೆ, ನಿಮಗೆ ಒಂದು ಪ್ರಕಾಶವನ್ನು ದಯಪಾಲಿಸಲಾಗುವುದು. ಆ ಪ್ರಕಾಶದೊಂದಿಗೆ ನೀವು ನಿಮ್ಮ ಎಲ್ಲ ಮಾರ್ಗಗಳಲ್ಲಿ ನಡೆಯುವಿರಿ. ಎಂದರೆ, ಆ

ಪ್ರಕಾಶ ನಿಮ್ಮ ಎಲ್ಲ ಕೃತ್ಯಗಳಲ್ಲಿ, ಮಾತುಗಳಲ್ಲಿ, ಶಕ್ತಿಗಳಲ್ಲಿ ಮತ್ತು ಇಂದ್ರಿಯಗಳಲ್ಲಿ ಬರುವುದು. ನಿಮ್ಮ ಬುದ್ಧಿಯಲ್ಲೂ ಪ್ರಕಾಶ ಇರುವುದು, ನಿಮ್ಮ ಬರೇ ಮಾತಿನಲ್ಲೂ ಪ್ರಕಾಶ ಇರುವುದು, ನಿಮ್ಮ ಕಣ್ಣುಗಳಲ್ಲೂ ಪ್ರಕಾಶ ಇರುವುದು, ನಿಮ್ಮ ಕಿವಿಗಳಲ್ಲಿ, ನಿಮ್ಮ ನಾಲಗೆಗಳಲ್ಲಿ, ನಿಮ್ಮ ಮಾತುಗಳಲ್ಲಿ, ನಿಮ್ಮ ಪ್ರತಿಯೊಂದು ಚಲನವಲನಗಳಲ್ಲಿ ಪ್ರಕಾಶ ಇರುವುದು. ನೀವು ನಡೆಯುವ ಮಾರ್ಗಗಳು ಪ್ರಕಾಶಮಯವಾಗುವುವು. ಒಟ್ಟಾರೆ, ನಿಮ್ಮ ಎಲ್ಲ ಮಾರ್ಗಗಳು, ನಿಮ್ಮ ಸಾಮರ್ಥ್ಯಗಳ ಮಾರ್ಗಗಳು, ನಿಮ್ಮ ಜ್ಞಾನೇಂದ್ರಿಯದ ಮಾರ್ಗಗಳು ಎಲ್ಲವೂ ಪ್ರಕಾಶದಿಂದ ತುಂಬುವುವು ಮತ್ತು ನೀವು ಪೂರ್ಣವಾಗಿಯೂ ಪ್ರಕಾಶದಲ್ಲಿ ನಡೆಯುವಿರಿ.

**(ಆಯಿನ ಕಮಾಲಾತೆ ಇಸ್ಲಾಂ, ರೂಹಾನೀ ಖಿಝಾಇನ್, ಭಾಗ 5, ಪುಟ 177–178)**

ಅಲ್ಲಾಹನು ನಮ್ಮೆಲ್ಲರನ್ನು ದೇವಭಕ್ತಿಯಲ್ಲಿ ನಡೆಸುತ್ತಾ ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಲು ಸೌಭಾಗ್ಯ ನೀಡಲಿ. ಅಲ್ಲಾಹನು ನಮ್ಮ ತಪ್ಪುಗಳನ್ನು, ಕೊರತೆಗಳನ್ನು ಮತ್ತು ದೌರ್ಬಲ್ಯಗಳನ್ನು ಮರೆಮಾಚಿಕೊಂಡು ತನ್ನ ಕೃಪೆಯನ್ನು ನಮಗೆ ಸದಾ ದಯಪಾಲಿಸುತ್ತಾ ಹೋಗಲಿ – ಆಮೀನ್.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ ದಿನಪತ್ರಿಕೆ, ಜೂನ್ 2, 2023, ಪುಟ 2–7)**